ಕರ್ನಾಟಕ ಲಲಿತಕಲಾ ಅಕಾಡೆಮಿ

ರೇಖಾಮುಖಿ ಪ್ರೊ. ವಿ.ಬಿ. ಹಿರೇಗೌಡರ್

Prof.V.B.HIREGOUDAR



ಎಸ್.ಎಂ. ಜಂಬುಕೇಶ್ವರ

ರೇಷಾಋಷಿ ಪ್ರೊ. ವಿ. ಬಿ. ಹಿರೇಗೌಡರ್

Resharushi Prof. V.B. Hiregoudar

ಎಸ್. ಎಂ. ಜಂಬುಕೇಶ್ವರ

ಕರ್ನಾಟಕ ಲಲಿತಕಲಾ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560 002

ದೂರವಾಣಿ: 080–22480297

RESHARUSHI Prof. V. B. HIREGOUDAR
A biography by S. M. Jambukeshwara


Published by
H.G. Vijayalakshmi
Registrar
Karnataka Lalithkala Academy, Kannada Bhavana,
J.C. Road, Bengaluru-560 002.
Ph: 080-22480297

ಮುದ್ರಣ : 2010
ಪುಟಗಳು : 10 + 50 + 20 = 80
ಪ್ರತಿಗಳು : 1000
ಬೆಲೆ : ರೂ. 80/–

ಆಂಗ್ಲ ಅನುವಾದ : ಪ್ರೊ. ಎಚ್.ಎಸ್. ಹರಿಶಂಕರ್
ಸಂಯೋಜನೆ : ಎಸ್.ಎಂ. ಜಂಬುಕೇಶ್ವರ

ಪ್ರಕಾಶಕರು
ಎಚ್.ಜಿ. ವಿಜಯಲಕ್ಷ್ಮಿ
ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – 560 002

ಮುದ್ರಕರು
ಇಳಾ ಮುದ್ರಣ
ನಂ. 36, 40 ಅಡಿ ರಸ್ತೆ, ರಾಘವನಗರ
ನ್ಯೂ ಟಿಂಬರ್ ಯಾರ್ಡ್ ಲೇಔಟ್, ಬೆಂಗಳೂರು–26
ದೂರವಾಣಿ : 26757159



ಅಧ್ಯಕ್ಷರ ಮಾತು


ಜಗತ್ತಿನ ವ್ಯಾಪಕಜ್ಞಾನ, ತಂತ್ರಜ್ಞಾನ ಮತ್ತು ಶೋಧನೆ-ಚಿಂತನೆಗಳನ್ನು ಸತ್ವಪೂರ್ಣವಾಗಿ ದಾಖಲಿಸುವ, ಓದುಗರ ಕಲಾ-ಜ್ಞಾನವನ್ನು ವಿಸ್ತರಿಸಿ ಅವರಲ್ಲಿ ಪುಸ್ತಕ ಸಂಸ್ಕೃತಿಯನ್ನು ಪ್ರಸರಿಸುವ ಕೆಲಸ ನಮ್ಮ ಅಕಾಡೆಮಿಯ ಮೂಲಕ ನಡೆಯುತ್ತಿದೆ. ಶ್ರವ್ಯ, ದೃಶ್ಯ ಮತ್ತು ವಾಚನ ಸಾಮಗ್ರಿಗಳ ಸಮರ್ಪಕ ಉತ್ಪಾದನೆ ಮೂಲಕ ವಿತರಣಾ ಪ್ರಕ್ರಿಯೆಗಳನ್ನು ಅಕಾಡೆಮಿಯ 'ಕಲಾವಾರ್ತೆಯ' ಮೂಲಕ ಪ್ರಯತ್ನಿಸುತ್ತಿದೆ. ಈಗಾಗಲೇ ವೈವಿಧ್ಯಮಯ ಮತ್ತು ವೈಶಿಷ್ಟ್ಯಪೂರ್ಣ ಕೃತಿಗಳನ್ನು ಪ್ರಕಟಿಸುವುದರ ಮೂಲಕ ಅಂತರಂಗ ಹಾಗೂ ಬಹಿರಂಗ ಸೌಂದರ್ಯಗಳನ್ನು ಉಜ್ವಲಿಸುವ ಇದು ತನ್ನ ಮುಂದಿನ ಗುರಿಯ ಕಡೆಗೆ ಆಶಾದಾಯಕವಾಗಿ ಚಲಿಸುತ್ತಿದೆ ಎಂದು ಹೇಳಬಯಸಿದರೆ ಅತಿಶಯೋಕ್ತಿಯಾಗಲಾರದು.

ಕಲೆ ಎಲ್ಲರನ್ನು ಕೈಬೀಸಿ ಕರೆಯುತ್ತದೆ, ಆದರೆ ಕೆಲವರನ್ನು ಮಾತ್ರ ಆರಿಸಿಕೊಳ್ಳುತ್ತದೆ ಎಂಬ ಮಾತು ಚರ್ಚೆಯಲ್ಲಿ ಇದೆ. ಈ ಮಾತು ಕಲೆಯ ಮಹತ್ವ, ವ್ಯಾಪ್ತಿ ಹಾಗೂ ವೈಶಿಷ್ಟ್ಯವನ್ನು ಅತ್ಯಂತ ಪರಿಣಾಮಕಾರಿಯಾಗಿ ಮತ್ತು ಶಕ್ತಿವತ್ತಾಗಿ ಅಭಿವ್ಯಕ್ತಿಸುತ್ತದೆ. ಒಂದರ್ಥದಲ್ಲಿ ಕಲೆ ತನ್ನ ಸತ್ವದ ಅಭಿವ್ಯಕ್ತಿಗಾಗಿ ಎಲ್ಲರನ್ನು ಆಹ್ವಾನಿಸಿದರೂ ಅದರ ಮೂಲ ತತ್ವವನ್ನು ಅರಿತು, ಅನುಭವಿಸಿ, ಧ್ಯಾನಿಸಿ, ಅನುಸಂಧಾನ ಮಾಡಿದ ನಂತರ ಅದರ ಆರಾಧನೆಯಲ್ಲಿ ತೊಡಗಿ ತಮ್ಮನ್ನು ಸಂಪೂರ್ಣವಾಗಿ ಅದಕ್ಕೆ ಅಂಟಿಕೊಂಡವರು ಬಹಳ ವಿರಳವೆಂದೇ ಹೇಳಬಹುದು. ಆದ್ದರಿಂದಲೆ ಕಲಾ ಕ್ಷೇತ್ರದಲ್ಲಿ ಪರಿಣಿತಿಯನ್ನು ಪಡೆಯುವವರು ಆ ಮೂಲಕ ವಿಭಿನ್ನ ಹಾಗೂ ವೈಶಿಷ್ಟ್ಯಪೂರ್ಣ ಕಲಾಕೃತಿಗಳನ್ನು ರಚಿಸುವವರ ಸಂಖ್ಯೆ ಕಡಿಮೆಯೆಂದೇ ತಿಳಿಯಬೇಕಾಗುತ್ತದೆ.

ಇಷ್ಟಾದರೂ ನಮ್ಮ ಪುರಾಣಗಳು, ಇತಿಹಾಸಗಳು, ಪುರಾತತ್ವ ದಾಖಲೆಗಳು ಭಾರತದಲ್ಲಿ ಅನಾದಿಕಾಲದಿಂದಲೂ; ಮಹತ್ವದ ಕಲಾಸಾಧಕರು ಇದ್ದುದನ್ನು ಮತ್ತು ಅಪೂರ್ವ ಕಲಾಕೃತಿಗಳನ್ನು ರಚಿಸಿದ್ದನ್ನು ಸಾದರಪಡಿಸುತ್ತವೆ. ಆಧುನಿಕ ಭಾರತವೂ ಸಹ ಇಂತಹ ಸಾಕಷ್ಟು ಕಲಾವಿದರನ್ನು ಸೃಷ್ಟಿಸಿದೆ. ಭಾರತೀಯ ಪಾರಂಪರಿಕ ಕಲೆಯ ಮಹೋನ್ನತಿಯನ್ನು ಮೈಗೂಡಿಸಿಕೊಳ್ಳುವುದರ ಜೊತೆಗೆ ಅನೇಕ ಕಾಲಘಟ್ಟಗಳಲ್ಲಿ ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಮೈದೋರಿದ ಹೊಸ ಹೊಸ ಕಲಾಪಂಥಗಳನ್ನು, ಚಿಂತನೆಗಳನ್ನು, ತಂತ್ರಮಾಧ್ಯಮಗಳನ್ನು ರೂಢಿಸಿಕೊಂಡು ಬಹು ಪ್ರಸಿದ್ಧಿಯನ್ನು ಪಡೆದ ಕಲಾವಿದರು ನಮ್ಮಲ್ಲಿ ಇರುವುದು ಅಭಿಮಾನಪಡುವಂಥದ್ದು. ಆದರೆ ಈ ಕಲಾವಿದರ ಜೀವನ ಮತ್ತು ಸಾಧನೆಗಳ ಬಗೆಗಿನ ವಿದ್ವತ್ ಹಾಗೂ ಅಧಿಕೃತ ದಾಖಲೆಗಳು ಹೆಚ್ಚಿನ ಪ್ರಮಾಣದಲ್ಲಿ ದೊರೆಯದಿರುವುದು ವಿಷಾದದ ಸಂಗತಿ. ಮತ್ತೊಂದೆಡೆ ಈ ಕ್ಷೇತ್ರದ ಮಹಾಸಾಧಕರನ್ನು, ಅವರ ಸಿದ್ಧಿ ಸಾಧನೆಗಳನ್ನು ಜೀವನದ ಏರಿಳಿತಗಳನ್ನು ಮತ್ತು ಅನುಭವಿಸಿದ ಸಾಕಷ್ಟು ಸಂತೋಷಗಳನ್ನು ಪರಿಚಯಿಸುವ ಗ್ರಂಥಗಳು ಅತ್ಯಲ್ಪವೇ ಎಂದು ಹೇಳಬಹುದು.

ತಮ್ಮೆಲ್ಲರಿಗೂ ತಿಳಿದಿರುವಂತೆ ಕರ್ನಾಟಕ ಲಲಿತಕಲಾ ಅಕಾಡೆಮಿಯು ವಿಶ್ವ ಭಾಷೆಯಾದ ದೃಶ್ಯಜ್ಞಾನವನ್ನು ಕನ್ನಡ ಭಾಷೆಯ ಮೂಲಕ ಪ್ರಚುರಗೊಳಿಸುವ ಕಾರ್ಯಕವನ್ನು ಪ್ರಾಯೋಗಿಕ ಚಟುವಟಿಕೆಗಳ ನಡುವೆಯೂ ಅತ್ಯಂತ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ. ಕಲಾಚಿಂತಕರು, ದೃಶ್ಯಸಾಹಿತ್ಯದ ಬಗೆಗೆ ಕಳಕಳಿ ಉಳ್ಳವರೂ ಆಗಿರುವ ಶ್ರೀ ಎಸ್.ಎಂ. ಜಂಬುಕೇಶ್ವರ ಅವರು ರಚಿಸಿದ ಪ್ರೊ. ವಿ.ಬಿ. ಹಿರೇಗೌಡರ ಕೃತಿಯನ್ನು ಅಕಾಡೆಮಿಯು ಪ್ರಕಟಿಸಲು ಹೆಮ್ಮೆ ಪಡುತ್ತಿದೆ. ಕೆಲವೇ ಮಾತುಗಳಲ್ಲಿ ಕಲಾವಿದರ ಸಾಧನೆಗಳನ್ನು ಹಿಡಿದಿರುವ ಕೌಶಲ ಇಲ್ಲಿ ಸುವ್ಯಕ್ತವಾಗಿವೆ. ಲೇಖಕರು ಸರಳವಾದ, ಎಲ್ಲರೂ ಪರಿಚಯ ಮಾಡಿಕೊಳ್ಳಲು ಅನುವುಮಾಡಿಕೊಟ್ಟಿದೆ. ಈ ಬರಹಗಳು ಕಲಾ ವಿದ್ಯಾರ್ಥಿಗಳಿಗೂ ಕಲಾಸಕ್ತರಿಗೂ ಬಹು ಉಪಯುಕ್ತವಾಗಿವೆ. ಇಂತಹ ವಿಶಿಷ್ಟ ಕೃತಿಯನ್ನು ಅಕಾಡೆಮಿಗೆ ಬರೆದುಕೊಟ್ಟ ಇವರಿಗೆ ನಮ್ಮ ಅಕಾಡೆಮಿಯ ಪರವಾಗಿ ಅಭಿನಂದನೆಗಳು ಸಲ್ಲುತ್ತವೆ.

■ನಾಡೋಜ ಜೆ.ಎಸ್. ಖಂಡೇರಾವ್



ಲೇಖಕರ ಅನಿಸಿಕೆ

ಕರ್ನಾಟಕದ ಹಿರಿಯ ಕಲಾವಿದರಲ್ಲೊಬ್ಬರಾದ ಪ್ರೊ. ವಿ.ಬಿ. ಹಿರೇಗೌಡರು ಕೇವಲ ಕಲಾವಿದರಷ್ಟೇ ಅಲ್ಲದೆ ಸುಮಾರು 27 ವರ್ಷಗಳಷ್ಟು ದೀರ್ಘಕಾಲ ದಾವಣಗೆರೆ ಕಲಾಶಾಲೆಯಲ್ಲಿ ಶಿಕ್ಷಕರಾಗಿ, ಪ್ರಾಂಶುಪಾಲರಾಗಿ, ಆಡಳಿತಗಾರರಾಗಿ ಅನುಭವ ಪಡೆದಿರುವ ಇವರ ಬಗ್ಗೆ ಒಂದು ಕಿರುಹೊತ್ತಿಗೆಯನ್ನು ಬರೆಯಲು ಅಕಾಡೆಮಿಯಿಂದ ನನಗೆ ಜವಾಬ್ದಾರಿ ನೀಡಿದರು. ಇದು ನಿಜಕ್ಕೂ ನನಗೆ ಹೆಮ್ಮೆಯ ವಿಷಯ.

ಪ್ರೊ. ವಿ.ಬಿ. ಹಿರೇಗೌಡರ್‌ರವರ ಬಗ್ಗೆ ನಾನು ಕೇಳಿದ್ದರೂ ಅವರ ಚಿತ್ರಗಳನ್ನು ಅಲ್ಲಲ್ಲಿ ನೋಡಿದ್ದರೂ ಸಹ ಅವರ ಪರಿಚಯವಾಗಿದ್ದು ಮಾತ್ರ 2005ರಲ್ಲಿ ಮೈಸೂರಿನ ಡಿ.ಎಂ.ಎಸ್. ಲಲಿತಕಲಾ ಮಹಾವಿದ್ಯಾಲಯದ ಸಮಾರಂಭದಲ್ಲಿ ನಂತರ ವೃತ್ತಿ ಸಂಬಂಧವಾಗಿ ನನ್ನ ಅವರ ಭೇಟಿ ಆಗಾಗ್ಗೆ ಆಗುತ್ತಿತ್ತು.

ಇನ್ನು ಪುಸ್ತಕ ಬರೆಯಲು ಪ್ರಾರಂಭಿಸಿದ ಮೇಲೆ ಮಾಹಿತಿಯ ಸಲುವಾಗಿ ನಾಲ್ಕಾರು ಬಾರಿ ಅವರ ಜೊತೆ ಕುಳಿತು ಮಾತನಾಡಿದ್ದೇನೆ. ಅವರ ಹಿಂದಿನ ಅನುಭವ ಕೇಳುತ್ತಿದ್ದರೆ ಕಲಾವಿದರ ಜೀವನ ನಡೆ ಎಂತಹ ಕಠಿಣವಾಗಿರುತ್ತದೆ ಎಂದು ಅನುಭವಕ್ಕೆ ಬರತೊಡಗಿತು. ಅವರು ರಚಿಸಿದ ಭಾವಚಿತ್ರಗಳನ್ನು ನೋಡುತ್ತಿದ್ದ ನನಗೆ ಅವರಲ್ಲಿನ ಒಳನೋಟಗಳು ಗೋಚರಿಸತೊಡಗಿದವು. ಆ ವರ್ಣ ವಿನ್ಯಾಸವನ್ನು ಅರ್ಥೈಸಿಕೊಳ್ಳಲು ನನಗೆ ಅನೇಕ ದಿನಗಳೇ ಹಿಡಿಯಿತು. ಕಾರಣ ನನಗೆ ಭಾವಚಿತ್ರ ರಚನೆಯ ಬಗ್ಗೆಯೇ ಹೆಚ್ಚಿನ ಒಲವು, ಇತ್ತೀಚಿನ ವರ್ಷಗಳಲ್ಲಿ ನವ್ಯ ಕಲಾವಿದರು ಭಾವಚಿತ್ರ ರಚನೆ,

ಒಂದು ಕಲೆಯೇ? ಎಂದು ಕೇಳುವವರೂ ಇದ್ದಾರೆ. ಅದರ ಬಗ್ಗೆ ಇಲ್ಲಿ ಚರ್ಚೆ ಅನಗತ್ಯ, ಕರ್ನಾಟಕದಲ್ಲಿ ಎಸ್.ಎಂ. ಪಂಡಿತ್ ನಂತರ ಇಂದು ಕೇವಲ ನಾಲ್ಕೈದು ಜನರನ್ನು ಮಾತ್ರ ಭಾವಚಿತ್ರ ರಚನೆಯಲ್ಲಿ ಹೆಸರಿಸಬಹುದಾಗಿದೆ.

ಇವರು ಕೇವಲ ಭಾವಚಿತ್ರ ರಚನೆಕಾರರಷ್ಟೇ ಅಲ್ಲ, ಪ್ರಕೃತಿ ಚಿತ್ರಗಳು ಹಾಗೂ ರೇಖಾಚಿತ್ರಗಳನ್ನು ಸಹ ಪೆನ್ಸಿಲ್, ಕ್ರೆಯಾನ್ಸ್, ಜಲ, ತೈಲವರ್ಣಗಳಲ್ಲಿ ಸಾವಿರಾರು ಚಿತ್ರಗಳನ್ನು ರಚಿಸಿದ್ದಾರೆ. ಇಂತಹವರ ಬಗ್ಗೆ ಪುಸ್ತಕ ಬರೆಯಬೇಕೆಂದರೆ ನಿಜಕ್ಕೂ ನನಗೆ ಸಿಕ್ಕ ಉತ್ತಮ ಅವಕಾಶ, ಹಾಗೆಯೇ ಇದು ಒಂದು ಸವಾಲು ಸಹ ಎನ್ನುವುದೇ ನನ್ನ ಭಾವನೆ.

ಲಲಿತಾಕಲಾ ಅಕಾಡೆಮಿಯ ಪ್ರಸ್ತುತ ಅಧ್ಯಕ್ಷರಾದ ಡಾ. ಜೆ.ಎಸ್. ಖಂಡೇರಾವ್‌ರವರು ಹಿರೇಗೌಡರ ಬಗ್ಗೆ ಪುಸ್ತಕ ಬರೆಯಲು ನನಗೆ ಅವಕಾಶ ನೀಡಿ, ನನ್ನ ಕಲಾಸಕ್ತಿ ವ್ಯಾಪಕತೆಯನ್ನು ಪಡೆಯಲು ಕಾರಣರಾಗಿದ್ದಾರೆ. ಅವರಿಗೆ ನಾನು ಕೃತಜ್ಞನಾಗಿರುತ್ತೇನೆ ಹಾಗೆಯೇ ಅಕಾಡೆಮಿಯ ಎಲ್ಲ ಸದಸ್ಯರಿಗೂ ರಿಜಿಸ್ಟ್ರಾರ್ ಆದ ಶ್ರೀಮತಿ ಹೆಚ್.ಜಿ. ವಿಜಯಲಕ್ಷ್ಮೀಯವರಿಗೂ ನನ್ನ ನೆನಕೆಗಳು. ಹಾಗೆಯೇ ಮಾಹಿತಿ ಮತ್ತು ಚಿತ್ರಗಳನ್ನು ಒದಗಿಸಿ, ಕೃತಿಯ ಸಮಗ್ರತೆಗೆ ಸಹಕರಿಸಿದ ಪ್ರೊ. ವಿ.ಬಿ. ಹಿರೇಗೌಡರಿಗೂ ನನ್ನ ಕೃತಜ್ಞತೆಗಳು.

■ ಎಸ್.ಎಂ. ಜಂಬುಕೇಶ್ವರ




ಎಸ್.ಎಂ. ಜಂಬುಕೇಶ್ವರ

ಛಾಯಾಚಿತ್ರ, ಚಿತ್ರಕಲೆ, ಪತ್ರಿಕೋದ್ಯಮ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ನಾಡಿನ ಹೆಸರಾಂತ ಕಲಾವಿದ ಎಸ್.ಎಂ. ಜಂಬುಕೇಶ್ವರ ಅವರು ಸರಳ ಸಜ್ಜನಿಕೆಯ ವ್ಯಕ್ತಿ, ಮೈಸೂರಿನ ಪ್ರತಿಷ್ಠಿತ ಜೆ.ಎಸ್.ಎಸ್. ವಿದ್ಯಾಸಂಸ್ಥೆಯಲ್ಲಿ ಸೇವೆ ಸಲ್ಲಿಸಿ ಈಗ ವಿಶ್ರಾಂತ ಜೀವನ ನಡೆಸುತ್ತಿರುವ ಜಂಬುಕೇಶ್ವರ ಸಂಘಟನಾ ಚತುರರು. ಎಲ್ಲರೊಂದಿಗೂ ಸ್ನೇಹದಿಂದ ಬೆರೆಯಬಲ್ಲ ಅವರು ತಮ್ಮ ನೇರನುಡಿಗೆ ಹೆಸರಾದವರು. ಹಿಡಿದ ಕಾರ್ಯವನ್ನು ಪೂರೈಸುವ ಛಲ ಇವರ ವ್ಯಕ್ತಿತ್ವದ ವೈಶಿಷ್ಟ್ಯ. ಬಾಲ್ಯದಿಂದಲೂ ಚಿತ್ರಕಲೆಯಲ್ಲಿ ಆಸಕ್ತಿ; ಗದುಗಿನ ವಿಜಯ ಕಲಾಮಂದಿರಕ್ಕೆ ಸೇರ್ಪಡೆ; ಅಲ್ಲಿಯ ಶಿಕ್ಷಣ ಜಂಬುಕೇಶ್ವರ ಅವರಲ್ಲಿ ಮೊಳಕೆಯಲ್ಲಿದ್ದ ಚಿತ್ರಕಲೆಯ ಗರಿ ಪಕ್ವವಾಗಿ, ಮೈಸೂರಿನ ಚಾಮರಾಜೇಂದ್ರ ವೃತ್ತಿ ಕಲಾ ಶಾಲೆಯಲ್ಲಿ ಐದು ವರ್ಷಗಳ ಕಾಲ ಅಧ್ಯಯನ. ಜಲವರ್ಣ, ತೈಲವರ್ಣ, ಭೂ-ದೃಶ್ಯ, ಸಂಯೋಜನೆ ಮುಂತಾದ ಕಲೆಗಳಲ್ಲಿ ಸಿದ್ಧಿ, ಚಿತ್ರಕಲೆಯೊಂದಿಗೆ ಛಾಯಾಚಿತ್ರದ ಹವ್ಯಾಸ. ಡಾ. ಶ್ರೀ ಶಿವರಾತ್ರಿ ರಾಜೇಂದ್ರಸ್ವಾಮಿಗಳವರು ಇವರ ಚಿತ್ರಕಲೆ ಹಾಗೂ ಛಾಯಾಚಿತ್ರಗಳನ್ನು ನೋಡಿ ಮೆಚ್ಚಿ ಇವರಿಗೆ ಎಲ್ಲ ರೀತಿಯ ಪ್ರೋತ್ಸಾಹ ನೀಡಿದುದರ ಪರಿಣಾಮ ಇವರೊಬ್ಬ ಅಂತಾರಾಷ್ಟ್ರೀಯ ಮಟ್ಟದ ಛಾಯಾಚಿತ್ರ ಕಲಾವಿದರಾಗಲು ಸಹಕಾರಿಯಾಯಿತು; ಇವರ ಅಹರ್ನಿಶಿ ಸಾಧನೆಯೂ ಅದಕ್ಕೆ ಪೂರಕವಾಯಿತು.

ಛಾಯಾಚಿತ್ರದಲ್ಲಿ ಇವರನ್ನು ಆಕರ್ಷಿಸಿದ್ದು ವನ್ಯಜೀವಿ ಛಾಯಾಚಿತ್ರಣ. ಅದೇನೂ ಅಷ್ಟು ಸುಲಭದ ಕೆಲಸವಲ್ಲ, ಆದರೂ ವನ್ಯಜೀವಿಗಳ ಅಪರೂಪದ

ಭಂಗಿಗಳನ್ನು ತಮ್ಮ ಕ್ಯಾಮರದಲ್ಲಿ ಸೆರೆಹಿಡಿಯುವಲ್ಲಿ ಯಶಸ್ವಿಯಾದರು. ಇದಕ್ಕಾಗಿ ಲಂಡನ್ನಿನ ರಾಯಲ್ ಫೋಟೋಗ್ರಫಿಕ್ ಸಂಸ್ಥೆಯಿಂದ ಎ.ಆರ್.ಪಿ.ಎಸ್. ಪ್ರಶಸ್ತಿ (1988). ಯುನೆಸ್ಕೊದ ಫೆಡರೇಷನ್ ಇಂಟರ್ ನ್ಯಾಷನಲ್ ಡಿಎಲ್‌ಆರ್ಟ್‌ನಿಂದ ಎ.ಎಫ್.ಐ.ಎ.ಪಿ. ಪ್ರಶಸ್ತಿ (1990), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (2010) ಇಂತಹ ಹತ್ತು ಹಲವು ಪ್ರಶಸ್ತಿಗಳ ಗರಿ ಇವರ ಮುಡಿಗೆ. ಇವರ ಚಿತ್ರಗಳು ಭಾರತದಲ್ಲಿ ಅಷ್ಟೇ ಅಲ್ಲ ಟರ್ಕಿ, ಸ್ಪೇನ್, ಚೀನಾ, ಸಿಂಗಪೂರ್, ಟೈವಾನ್, ಫಿನ್‌ಲೆಂಡ್ ಮೊದಲಾದ ಜಗತ್ತಿನ ಪ್ರಮುಖ ಸ್ಥಳಗಳಲ್ಲಿ ಪ್ರದರ್ಶನಗೊಂಡು ಕಲಾರಸಿಕರಿಂದ ಮೆಚ್ಚುಗೆ ಪಡೆದಿವೆ. 1988ರಲ್ಲಿ ಟರ್ಕಿ, 1989ರಲ್ಲಿ ಟೈವಾನ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಛಾಯಾಚಿತ್ರ ಸ್ಪರ್ಧೆಗಳಲ್ಲಿ ಭಾರತದಿಂದ ಪ್ರವೇಶ ಪಡೆದ ಹತ್ತು ಮಂದಿ ಗಣ್ಯ ಛಾಯಾಚಿತ್ರ ಗ್ರಾಹಕರಲ್ಲಿ ಶ್ರೀ ಜಂಬುಕೇಶ್ವರರೂ ಸಹ ಒಬ್ಬರು ಎನ್ನುವುದು ನಾವೆಲ್ಲ ಹೆಮ್ಮೆ ಪಡಬೇಕಾದ ಸಂಗತಿ. ಹಾಗೆಯೇ ಟರ್ಕಿಯಲ್ಲಿ ಪ್ರಶಸ್ತಿ ಹಾಗೂ ಟೈವಾನ್‌ನಲ್ಲಿ ಹಾನರ್‌ಬಲ್ ಮೆನ್‌ಷನ್ ಸಹ ಪಡೆದಿರುವುದು ಇವರ ಹೆಗ್ಗಳಿಕೆ. ಕರ್ನಾಟಕ ಲಲಿತಕಲಾ ಅಕಾಡೆಮಿಗೆ ಎರಡನೆ ಬಾರಿ ಸದಸ್ಯರಾಗಿ, ಮೈಸೂರು ಜಿಲ್ಲಾ ಪತ್ರಕರ್ತ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಚಾಮರಾಜೇಂದ್ರ ಅಕಾಡೆಮಿ ಆಫ್ ವಿಶುಯಲ್ ಆರ್ಟ್ಸ್ (ಕಾವ)ದಲ್ಲಿ ಅತಿಥಿ ಉಪನ್ಯಾಸಕರಾಗಿ ಇವರದು ಗಣನೀಯ ಸೇವೆ. 'ಯುರೋಪಿನಲ್ಲಿ 45 ದಿನಗಳು' ಇವರ ಪ್ರವಾಸ ಕಥನ, ಹೀಗೆ ಕಲೆ, ಸಾಹಿತ್ಯ ಮತ್ತು ಪತ್ರಿಕೋದ್ಯಮದಲ್ಲಿ ಅನುಪಮ ಸೇವೆ ಸಲ್ಲಿಸಿದ ಜಂಬುಕೇಶ್ವರ ಬಳ್ಳಾರಿಯಲ್ಲಿ ಜನಿಸಿ, ಮೈಸೂರಿನಲ್ಲಿ ಬೆಳೆದು ಹೆಮ್ಮರವಾದ ಪ್ರಥಮ ದರ್ಜೆಯ ಕಲಾವಿದರು. ಈ ಕಾರಣಕ್ಕಾಗಿಯೇ ಇವರಿಗೆ ಸಾಂಸ್ಕೃತಿಕ ಕ್ಷೇತ್ರದ ಸಹೃದಯ ಬಂಧುಗಳು 'ಬಹುಮುಖಿ' ಎನ್ನುವ ಅಭಿನಂದನಾ ಗ್ರಂಥವನ್ನು ಅರ್ಪಿಸಿದ್ದಾರೆ. ಕೃತಿಯ ಶೀರ್ಷಿಕೆಗೆ ತಕ್ಕಂತೆ ಶ್ರೀಯುತ ಜಂಬುಕೇಶ್ವರರವರು ಬಹುಮುಖ ಪ್ರತಿಭೆಯ ಕಲಾವಿದರಾಗಿದ್ದಾರೆ.

■ ದೇ.ಜ.ಗೌ.



ರೇಷಾಋಷಿ ಪ್ರೊ. ಎ. ಬಿ. ಹಿರೇಗೌಡರ್

ರೇಖಾಋಷಿ
ಪ್ರೊ. ವಿ.ಬಿ. ಹಿರೇಗೌಡರ್

ಮಾನವ ಪ್ರಕೃತಿಯ ಸಾಂಸ್ಕೃತಿಕ ವಿಶೇಷಣಗಳೆಲ್ಲವನ್ನೂ ತನ್ನಲ್ಲಿ ಮೈಗೂಡಿಸಿಕೊಂಡೇ ಬದುಕುತ್ತಾನೆ. ಆ ಬದುಕಿನಲ್ಲಿ ಅನೇಕ ಬಗೆಯ ಸೃಜನಾತ್ಮಕ ಚಿಂತನೆಗಳು ಗರಿಗೆದರುತ್ತವೆ. ಆ ಒಂದು ಬಗೆಯ ಸೃಜನಾತ್ಮಕ ಅಲೆಗಳು, ಅಕ್ಷರ, ಧ್ವನಿ, ಅಭಿನಯ, ದೃಶ್ಯಮಾಧ್ಯಮದ ಅಭಿವ್ಯಕ್ತಿಗೆ ಒಂದು ಸ್ಪಷ್ಟರೂಪ ಪ್ರಕಟವಾಗುತ್ತದೆ. ಇಂತಹ ಅಭಿವ್ಯಕ್ತಿಗೆ ಮನುಷ್ಯನ ಸುತ್ತಲಿನ ಪರಿಸರವೂ ಕಾರಣವಾಗುತ್ತದೆ. ಪರಿಸರದಲ್ಲಿಯೇ ಮಾನವನ ಬೆಳವಣಿಗೆ ಬೆಳೆಯುತ್ತಾ ಬರುತ್ತದೆ. ಭವಿಷ್ಯತ್ತಿನ ಹೆಜ್ಜೆಗಳೂ ಸಹ ಬಾಲ್ಯದಿಂದಲೇ ಗೋಚರಿಸುತ್ತವೆ.

ಇಂತಹ ಪರಿಸರದಲ್ಲಿ ಬೆಳೆದ ಕಲಾವಿದ ವಿ.ಬಿ. ಹಿರೇಗೌಡರ್‌ರವರು, (ವಿರೂಪಾಕ್ಷ ಬಸನಗೌಡ ಹಿರೇಗೌಡರ್) ತಂದೆ ಬಸನಗೌಡ ತಾಯಿ ಗಂಗಮ್ಮನವರ ಸುಪುತ್ರರಾಗಿ ಜನಿಸಿದ್ದು ಕಲೆ, ಸಾಹಿತ್ಯ, ಸಂಸ್ಕೃತಿಯ ತವರಾದ ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಒಂದು ಕುಗ್ರಾಮ, ಗುಡಗೇರಿಯಲ್ಲಿ 1.4.1943ರಂದು.

ತಾಯಿ ಗಂಗಮ್ಮನವರು ಮನೆಯ ಕೆಲಸದ ಮಧ್ಯೆ ಬಿಡುವಿನ ವೇಳೆಯಲ್ಲಿ ಸೀರೆ, ಕುಪ್ಪಸಗಳಿಗೆ ಬಣ್ಣ ಬಣ್ಣದ ದಾರಗಳಿಂದ ಕಸೂತಿ ಚಿತ್ತಾರಗಳನ್ನು ಬಿಡಿಸುತ್ತಿದ್ದರು, ಹಬ್ಬ ಹರಿದಿನಗಳಂದು ಗೋಡೆಗೆ ಹಾಕುವ ಹಸೆ ಚಿತ್ರಗಳನ್ನು

ಗಮನಿಸುತ್ತಿದ್ದ ಬಾಲಕ ವಿರೂಪಾಕ್ಷನಿಗೆ ಕಲೆಯ ಪ್ರಭಾವ ಬೀರಿರಬಹುದು. ಇದರಿಂದಾಗಿ ವಿರೂಪಾಕ್ಷನೂ ಸಹ ಕುತೂಹಲದಿಂದ ನೆಲದ ಮೇಲೆ, ಗೋಡೆಯ ಮೇಲೆ ಬಳಪದಿಂದ ಚಿತ್ರ ಬಿಡಿಸಲು ಪ್ರಾರಂಭಿಸುವನು.

ಇದನ್ನು ಕಂಡ ಅಲ್ಲಿನ ಪ್ರಾಥಮಿಕ ಶಾಲಾ ಶಿಕ್ಷಕ ಹರದಟ್ಟಿಯವರು ಆತನಲ್ಲಿರುವ ಕಲೆಯ ಉತ್ಸಾಹಕ್ಕೆ ಪ್ರೋತ್ಸಾಹ ನೀಡುತ್ತಾ ಬರುವರು. ಇದರಿಂದಾಗಿ ಶಾಲೆಗಳಲ್ಲಿ ಆಚರಿಸುವ ಸರಸ್ವತಿ ಪೂಜೆ, ಗಣಪತಿ ಪೂಜೆ, ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವ ಸಂದರ್ಭಗಳಲ್ಲಿ ವಿವಿಧ ಬಗೆಯ ಬಣ್ಣ ಬಣ್ಣದ ರಂಗೋಲಿಗಳನ್ನು ರಚಿಸುವಲ್ಲಿ ಸಿದ್ಧಹಸ್ತನಾಗುತ್ತಾನೆ.

ಮಾಧ್ಯಮಿಕ ಶಾಲೆಗೆ ಬಂದ ಮೇಲೂ ಕೂಡ ಇತರೆ ವಿಷಯಗಳ ಕಡೆಗೆ ಗಮನಕೊಡದೆ, ಕೇವಲ ಚಿತ್ರ ಬಿಡಿಸುವುದರಲ್ಲಿಯೇ ಹೆಚ್ಚು ಆಸಕ್ತಿಯನ್ನು ತೋರಿಸುತ್ತಿದ್ದರಿಂದ ಅಲ್ಲಿನ ಕೆಲವು ಶಿಕ್ಷಕರಿಗೂ ಈತನ ಬಗ್ಗೆ ಕೋಪ ಬಂದಿದ್ದು ಉಂಟು. ಹಾಗೆಯೇ ಕೆಲವರು ಸಂತೋಷ ವ್ಯಕ್ತಪಡಿಸಿದ್ದೂ ಉಂಟು. ಈತನಲ್ಲಿ ಸುಪ್ತವಾಗಿ ಅಡಗಿದ್ದ ಕಲೆಗೆ ಪ್ರೋತ್ಸಾಹ ಕೊಡುವುದು ಉಪಾಧ್ಯಾಯರಿಗೂ ಅನಿವಾರ್ಯವಾಗಿತ್ತು.

ಇದರಿಂದಾಗಿ ನಾಟಕಗಳ ರಂಗಪರದೆಗಾಗಿ ಚಿತ್ರ ಬಿಡಿಸುತ್ತಿದ್ದ ಕಲಾವಿದ ಕಾಳಪ್ಪ ಸಾಬಣ್ಣನವರ ಬಳಿ ಕುತೂಹಲದಿಂದ ನೋಡಲು ಹೋಗುತ್ತಿದ್ದ ವಿರೂಪಾಕ್ಷ, ಹೀಗೆಯೇ ದಿನಕಳೆದಂತೆ ಅವರು ಹೇಳಿದ ಬಣ್ಣ ಮಿಶ್ರಣ ಮಾಡಿಕೊಡುವುದು, ಅವರು ಬಟ್ಟೆಯ ಮೇಲೆ ಬರೆದ ರೇಖಾಚಿತ್ರಗಳಿಗೆ ಹೇಳಿದಂತೆ ಬಣ್ಣವನ್ನು ತುಂಬುವುದು ಹೀಗೆ ಅವರಿಗೆ ಎಲ್ಲ ರೀತಿಯ ಸಹಕಾರ ನೀಡಿ ಚಿಕ್ಕ ವಯಸ್ಸಿನಲ್ಲಿಯೇ ಪರದೆ ರಚಿಸುವ ಅನುಭವ ಪಡೆದ.

ಹೀಗೆ ಕಾಳಪ್ಪನವರ ಮಾರ್ಗದರ್ಶನದಿಂದ 10–12 ವರ್ಷದವನಿದ್ದಾಗಲೇ ಹಬ್ಬ ಹರಿದಿನಗಳಲ್ಲಿ ಊರಿನ ಅಂಗಡಿಗಳ ಗೋಡೆಗಳ ಮೇಲೆ ಸ್ವತಂತ್ರವಾಗಿ ಅಲಂಕಾರಿಕ ಹೂಗಳ ವಿನ್ಯಾಸ ರಚಿಸುವುದು, ನಾಮಫಲಕಗಳನ್ನು ಬರೆಯುವುದು, ಊರಿನ ಚುನಾವಣಾ ಸಂದರ್ಭದಲ್ಲಿ ಬ್ಯಾನರ್‌ಗಳನ್ನು ಬರೆಯುವ ಹವ್ಯಾಸಗಳನ್ನೂ ರೂಢಿಸಿಕೊಂಡಿದ್ದ. ಮಹಾತ್ಮಗಾಂಧಿ, ನೆಹರೂ ಮುಂತಾದ ಪ್ರಮುಖರ ಮುದ್ರಣಗೊಂಡ ಭಾವಚಿತ್ರಗಳನ್ನು ನೋಡಿಕೊಂಡು ಚಿತ್ರಿಸುತ್ತಿದ್ದುದನ್ನು ಗಮನಿಸುತ್ತಿದ್ದ ಸ್ನೇಹಿತರು ಹಾಗೂ ಶಿಕ್ಷಕರು ಆತನನ್ನು ಬೆನ್ನು ತಟ್ಟಿ ಪ್ರೋತ್ಸಾಹಿಸುತ್ತಿದ್ದರು.

ಗುಡಗೇರಿ ಪ್ರೌಢಶಾಲೆಗೆ ಸೇರಿದಮೇಲೆ ಅಲ್ಲಿನ ಚಿತ್ರಕಲಾಶಿಕ್ಷಕ, ಸಿ.ಬಿ. ಮೆಳ್ಳೆಗಟ್ಟಿಯವರಿಂದ ಜೀವನದಲ್ಲಿ ಮಹತ್ತರ ಬದಲಾವಣೆಯಾಗುತ್ತದೆ. ಈತನು ರಚಿಸುತ್ತಿದ್ದ ಚಿತ್ರಗಳನ್ನು ಗಮನಿಸುತ್ತಿದ್ದ ಕಲಾಶಿಕ್ಷಕರು ಈತನಿಗೆ ಹೆಚ್ಚಿನ ಪ್ರೋತ್ಸಾಹ ನೀಡಿ ಲೋಯರ್ ಮತ್ತು ಹೈಯರ್ ಗ್ರೇಡ್ ಡ್ರಾಯಿಂಗ್ ಪರೀಕ್ಷೆಗಳಿಗೆ ಕೂರಿಸುವರು. ಅದಕ್ಕಾಗಿ ಹೆಚ್ಚಿನ ತರಬೇತಿಯನ್ನು ನೀಡುವರು. ಎರಡೂ ಪರೀಕ್ಷೆಗಳಲ್ಲಿಯೂ ವಿರೂಪಾಕ್ಷ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದುತ್ತಾನೆ.

ಶಾಲೆಯ ಇತರೆ ವಿಷಯಗಳ ಅಧ್ಯಾಪಕರು ನೀನು ಕೇವಲ ಚಿತ್ರ ಬಿಡಿಸುತ್ತಾ ಇದ್ದರೆ ಹೇಗೆ? ಎಸ್.ಎಸ್.ಎಲ್.ಸಿ. ಪರೀಕ್ಷೆ ಪಾಸ್ ಮಾಡಲ್ವಾ? ಎಂದು ಕೇಳಿದ್ದೂ ಉಂಟು. ಆದರೂ ಅದನ್ನು ಮನಸ್ಸಿಗೆ ಹಾಕಿಕೊಳ್ಳದೆ ಚಿತ್ರಗಳನ್ನು ರಚಿಸುತ್ತಲೇ ಇತರ ವಿಷಯಗಳನ್ನು ಅಭ್ಯಾಸ ಮಾಡತೊಡಗಿದ. ಅದೇ ವರ್ಷ ಶಾಲೆಯ ವಾರ್ಷಿಕೋತ್ಸವ ಪ್ರಯುಕ್ತ "ಬೆಳಗು" ಎಂಬ ಶಾಲಾ ವಾರ್ಷಿಕ ಕೈಬರಹದ ಸಂಚಿಕೆ ತರಬೇಕೆಂದು ಸಿದ್ಧತೆಗಳು ನಡೆದವು. ಶಾಲೆಯ ಇತರೆ ವಿದ್ಯಾರ್ಥಿಗಳಿಂದ ಕೈಬರಹ ಲೇಖನಗಳನ್ನು ಸಂಗ್ರಹಿಸಿದರು. ಅದಕ್ಕೆ ರಕ್ಷಾಪುಟ ವಿನ್ಯಾಸವನ್ನು ಮಾಡಲು ಅದೇ ಶಾಲೆಯ ಚಿತ್ರಕಲಾ ಶಿಕ್ಷಕರಿಗೆ ಹಾಗೂ ವಿರೂಪಾಕ್ಷನಿಗೆ ವಹಿಸುವರು. ಈರ್ವರು ರಚಿಸಿದ ರಕ್ಷಾಪುಟದ ಚಿತ್ರಗಳನ್ನು ನೋಡಿದ ಮುಖ್ಯೋಪಾಧ್ಯಾಯ ಶ್ರೀಯುತ ಎನ್.ಬಿ. ಹಾಲಿ ಹಾಗೂ ಅಧ್ಯಾಪಕ ವರ್ಗದವರು ವಿರೂಪಾಕ್ಷನೇ ಬಿಡಿಸಿದ ಚಿತ್ರವನ್ನು ರಕ್ಷಾಪುಟಕ್ಕೆ ಆಯ್ಕೆಮಾಡುವರು. ಇದರಿಂದ ಚಿತ್ರಕಲಾಶಿಕ್ಷಕರಿಗೆ ಅವಮಾನವಾದಂತಾಗಿ ಸ್ವಲ್ಪದಿನ ಮಾತನಾಡಿಸುವುದನ್ನೇ ಬಿಟ್ಟಿದ್ದರಂತೆ. ನಂತರ ವಾಸ್ತವತೆ ಅರಿವಾಗಿ ವಿರೂಪಾಕ್ಷನನ್ನು ಗೌರವ, ಪ್ರೀತಿಯಿಂದ ಕಾಣಲು ಪ್ರಾರಂಭಿಸುವರು.

ಮುಂದೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಚಿತ್ರಕಲೆಯನ್ನು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡು ಧಾರವಾಡದ ಪರೀಕ್ಷಾ ಕೇಂದ್ರಕ್ಕೆ ಅತಿ ಹೆಚ್ಚು ಅಂಕ ಪಡೆದು, ಕಲೆಯಲ್ಲಿ ಡಿಸ್ಟಿಂಕ್ಷನ್‌ನಲ್ಲಿ ಪಾಸಾಗುತ್ತಾನೆ. ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲಾ ಹಂತಗಳಲ್ಲಿ ವಿರೂಪಾಕ್ಷ ಅತ್ಯಂತ ಆಸಕ್ತಿಯಿಂದ ಚಿತ್ರ ಬಿಡಿಸುವುದನ್ನೂ ಕಲಿತಿದ್ದರಿಂದ ಇಂದಿನ ಸಮಕಾಲೀನ ಸಂದರ್ಭದ ಕ್ರಿಯಾಶೀಲ ಕಲಾವಿದರಾಗಿ ರೂಪುಗೊಂಡು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ.

ಕಲಾಶಿಕ್ಷಣ

ಆಂಗ್ಲರು ಭಾರತೀಯರನ್ನು ಆಳುತ್ತಿರುವಾಗಲೇ ತಮ್ಮದೇ ಆದ ಶೈಕ್ಷಣಿಕ ಪದ್ಧತಿಯನ್ನು ಭಾರತದಲ್ಲಿ ಬೆಳೆಯುವಂತೆ ಮಾಡಿದರು. ಅವರು ತಮ್ಮ ಅಧಿಕಾರಿಗಳ ಉಸ್ತುವಾರಿಯಲ್ಲಿ ಮದ್ರಾಸು, ಬೊಂಬಾಯಿ, ಕಲ್ಕತ್ತಾಗಳಲ್ಲಿ ಕಲಾ ಶಾಲೆಗಳನ್ನು ಪ್ರಾರಂಭಿಸುವರು. ಆದರೆ, ಉತ್ತರ ಕರ್ನಾಟಕದಲ್ಲಿ ಡಿ.ವಿ. ಹಾಲಭಾವಿಯವರು 1935ರಲ್ಲಿ ಧಾರವಾಡದಲ್ಲಿ ಕಲಾಶಾಲೆಯನ್ನು ಸ್ಥಾಪಿಸಿದರೂ ಬೊಂಬಾಯಿಯ ಜೆ.ಜೆ.ಸ್ಕೂಲ್ ಆಫ್ ಆರ್ಟ್‌ನ ಪಠ್ಯಕ್ರಮ ಮತ್ತು ಪರೀಕ್ಷಾ ಕ್ರಮಗಳನ್ನೇ ಅನುಸರಿಸುತ್ತಿದ್ದರು. ಇದರಿಂದಾಗಿ ಕರ್ನಾಟಕದಲ್ಲಿ ಕಲಾಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ತುಂಬ ಅನುಕೂಲವಾಯಿತು. ಇಂತಹ ವಿದ್ಯಾರ್ಥಿಗಳಲ್ಲಿ ವಿ.ಬಿ. ಹಿರೇಗೌಡರವರೂ ಒಬ್ಬರಾದರು.

ಹನ್ನೊಂದನೆಯ ತರಗತಿ (ಎಸ್.ಎಸ್.ಎಲ್.ಸಿ) ಮುಗಿದ ಮೇಲೆ ಹಿರೇಗೌಡರ್‌ರವರು ಚಿತ್ರಕಲೆಯ ಉನ್ನತ ವ್ಯಾಸಂಗಕ್ಕೆ ಧಾರವಾಡಕ್ಕೆ ಹೋಗಲು ನಿರ್ಧರಿಸುವರು. ಮನೆಯ ಆರ್ಥಿಕ ಪರಿಸ್ಥಿತಿಯಿಂದಾಗಿ ವಿದ್ಯಾರ್ಥಿನಿಲಯ ದಲ್ಲಾಗಲಿ ಪ್ರತ್ಯೇಕ ಕೊಠಡಿಯಲ್ಲಾಗಲಿ ಇದ್ದುಕೊಂಡು ವ್ಯಾಸಂಗ ಮಾಡುವುದು ಕಷ್ಟದ ಕೆಲಸವಾಗಿತ್ತು. ಇದರಿಂದಾಗಿ ಅವರು ತಮ್ಮ ಸೋದರಮಾವನ ಮನೆಯಲ್ಲಿಯೇ ಇದ್ದುಕೊಂಡು ವ್ಯಾಸಂಗ ಮಾಡಲು ಸಿದ್ಧರಾಗುತ್ತಾರೆ. ಆಗಿನ ಸಂದರ್ಭದಲ್ಲಿ ಅವರ ಸೋದರಮಾವಂದಿರು ನೀನು ಚಿತ್ರಕಲೆಯನ್ನು ಕಲಿತು ಮಾಡುವುದಾದರೂ ಏನಿದೆ? ಇವತ್ತು ನಿನ್ನ ಚಿತ್ರಗಳನ್ನು ನೋಡಿ ಮೆಚ್ಚುತ್ತಾರೆ. ನಾಳೆ ಮರೆತುಬಿಡುತ್ತಾರೆ. ಇಂಜಿನಿಯರಿಂಗ್ ಅಥವಾ ಯಾವುದಾದರೂ ಡಿಗ್ರಿ ಮಾಡಿದರೆ ಎಲ್ಲಾದರೂ ಕೆಲಸ ಸಿಕ್ಕೇಸಿಕ್ಕುತ್ತದೆ ಎಂಬ ಅವರ ಮಾತನ್ನು ಕೇಳಿ ಅನಿವಾರ್ಯವಾಗಿ 1962ರಲ್ಲಿ ಕರ್ನಾಟಕ ಕಾಲೇಜಿನಲ್ಲಿ ಪಿ.ಯು.ಸಿ.ಗೆ ಪ್ರವೇಶ ಪಡೆಯುತ್ತಾರೆ.

ಕಲಾಶಿಕ್ಷಕರಾಗಿದ್ದ ಮೆಳ್ಳೇಗಟ್ಟಿಯವರ ಮಾರ್ಗದರ್ಶನದಿಂದಾಗಿ ಚಿತ್ರಕಲೆಯ ಅಭ್ಯಾಸ ಮಾಡಲೇಬೇಕೆಂದು ತೀರ್ಮಾನಿಸಿ ಮನೆಯವರ ವಿರೋಧದ ನಡುವೆಯೇ ಪಿ.ಯು.ಸಿ. ಅಧ್ಯಯನದ ಜೊತೆಗೆ ಕಲಾಭ್ಯಾಸಕ್ಕಾಗಿ ಕಲಾಗುರು ಶ್ರೀ ಡಿ.ವಿ. ಹಾಲಭಾವಿಯವರ ಕಲಾಶಾಲೆಗೆ ಅದೇ ವರ್ಷ ಸೇರುವರು. ಬೆಳಗ್ಗೆ 8ರಿಂದ 12 ಗಂಟೆಯವರೆಗೆ ಕಲಾಭ್ಯಾಸವಾದರೆ ಮಧ್ಯಾಹ್ನ 1ರಿಂದ ಪಿ.ಯು.ಸಿ. ವ್ಯಾಸಂಗಕ್ಕೆ ಹೋಗುತ್ತಿದ್ದರು.

ಚಿತ್ರಕಲಾ ಅಭ್ಯಾಸ ಮಾಡಲು ಕಾಲೇಜಿಗೆ ಸೇರಿದರೂ ಅವರ ಸೋದರ ಮಾವನ ಮನೆಯಲ್ಲಿ ಕಲಾಧ್ಯಯನಕ್ಕೆ ಪೂರಕ ವಾತಾವರಣ ಇರಲಿಲ್ಲ. ಹೀಗಾಗಿ ಆ ಸಂದರ್ಭದಲ್ಲಿ ಅವರಿಗೆ ಅತಿಯಾದ ಆರ್ಥಿಕ ತೊಂದರೆಯೂ ಉಂಟಾಗಿ ಶಿಕ್ಷಣ ಮುಂದುವರೆಸಲು ಕಷ್ಟವಾಗುತ್ತದೆ. ಮನೆಯವರ ವಿರೋಧದ ನಡುವೆಯೂ ಕಲಾಧ್ಯಯನ ಮುಂದುವರಿಸಿದ್ದರಿಂದ ಆರ್ಥಿಕ ಸಹಕಾರವೂ ಇವರಿಗೆ ಸಿಕ್ಕಲಿಲ್ಲ. ಇದರಿಂದಾಗಿ ಇವರು ಬಿ.ಎಡ್. ವಿದ್ಯಾರ್ಥಿಗಳಿಗೆ ಪಾಠದ ಚಿತ್ರಗಳನ್ನು (ಟೀಚಿಂಗ್ ಏಡ್ಸ್) ಬರೆದುಕೊಡುವುದರ ಮೂಲಕ ಹಾಗು ಛಾಯಾಚಿತ್ರಗಳನ್ನು ತೆಗೆಯುವುದರ ಮುಖಾಂತರವೂ ಅಲ್ಪಸ್ವಲ್ಪ ಹಣ ಗಳಿಸುತ್ತಾರೆ. ಇದನ್ನು ಗಮನಿಸುತ್ತಿದ್ದ ಅವರ ಸ್ನೇಹಿತರೊಬ್ಬರು, ಧಾರವಾಡದ ರಾಮಾಶ್ರಯ ಬುಕ್ ಡಿಪೋದಲ್ಲಿ ಸಂಜೆ ಹೊತ್ತಿನಲ್ಲಿ ಕೆಲಸ ಮಾಡಲು ಸೇರಿಸುವರು. ಅಲ್ಲಿ ವಿವಿಧ ರಾಜ್ಯಗಳ ನಕ್ಷೆಗಳನ್ನು ಬಿಡಿಸುವುದು, ಅವುಗಳಿಗೆ ಬಣ್ಣ ತುಂಬುವುದು, ಪಠ್ಯಪುಸ್ತಕಗಳ ರಕ್ಷಾಪುಟಕ್ಕೆ ಚಿತ್ರಗಳನ್ನು ಬಿಡಿಸುವುದು ಅವರ ಕೆಲಸವಾಗಿತ್ತು. ಇದರಿಂದಾಗಿ ಅವರ ಜೀವನ ನಿರ್ವಹಣೆಗೆ ಆದಾಯ ಕಲ್ಪಿಸಿಕೊಂಡು ಕಲಾಭ್ಯಾಸ ಮುಂದುವರಿಸಿದರು.

ಸರ್ಕಾರಿ ನೌಕರಿ

ಇವರು ಕಷ್ಟಪಡುವುದನ್ನು ಗಮನಿಸುತ್ತಿದ್ದ ಇವರ ಸೋದರಮಾವನವರು ಇವರಿಗೆ ವಿದ್ಯುತ್‌ಮಂಡಳಿ ಕಛೇರಿಯಲ್ಲಿ ಕಛೇರಿಸಹಾಯಕ ಹುದ್ದೆಗೆ ನೇಮಕಗೊಳ್ಳಲು ಸಹಕಾರಿಯಾಗುತ್ತಾರೆ. ಧಾರವಾಡದಲ್ಲಿ ಕೆಲ ತಿಂಗಳು ಕೆಲಸ ನಿರ್ವಹಿಸಿದ ಮೇಲೆ ಅವರನ್ನು ಹುಬ್ಬಳ್ಳಿಗೆ ವರ್ಗಾಯಿಸುತ್ತಾರೆ. ಇದರಿಂದ ಚಕಿತರಾದ ಗೌಡರು ಕಲಾಧ್ಯಯನ ಮುಂದುವರೆಸುವ ಪರ್ಯಾಯ ಮಾರ್ಗಗಳನ್ನು ಹುಡುಕುವರು.

ಹುಬ್ಬಳ್ಳಿಗೆ ಬಂದ ಮೇಲೆ ಮೂರುಸಾವಿರ ಮಠದ ವಿಜಯ ಮಹಂತೇಶ ಲಲಿತಕಲಾ ಮಹಾವಿದ್ಯಾಲಯದ ನಿರ್ದೇಶಕರಾದ ಡಾ. ಎಂ.ವಿ. ಮಿಣಜಿಗಿಯವರನ್ನು ಕಂಡು ಕಲಾಭ್ಯಾಸ ಮುಂದುವರೆಸಲು ಅವಕಾಶ ಮಾಡಿಕೊಡಬೇಕೆಂದು ವಿನಂತಿಸುವರು, ಹಾಲಭಾವಿ ಕಲಾ ಶಾಲೆಯಲ್ಲಿ ಅಡ್ವಾನ್ಸ್ ಪೇಂಟಿಂಗ್ ಅಭ್ಯಾಸದ ಸಂದರ್ಭದಲ್ಲಿ ರಚಿಸಿದ್ದ ಕಲಾಕೃತಿಗಳನ್ನು ಮಿಣಜಿಗಿಯವರಿಗೆ ತೋರಿಸುವರು, ಈ ಚಿತ್ರಗಳನ್ನು ನೋಡಿ ಸಂತಸಗೊಂಡ ಪ್ರಾಂಶುಪಾಲರು ಡಿಪ್ಲೋಮ ಪೇಂಟಿಂಗ್ ತರಗತಿಗೆ ಪ್ರವೇಶ ಕೊಡುವರು. ಅಲ್ಲಿ

ವೈ.ಎಚ್. ಸಂಗೂರರವರು ಕಲಾಶಿಕ್ಷಕರಾಗಿದ್ದರು, ಈ ಇಬ್ಬರ ಮಾರ್ಗದರ್ಶನದಲ್ಲಿ ಕಲಾಧ್ಯಯನ ಮುಂದುವರೆಯಿತು, ಈ ಮಧ್ಯೆ ಮತ್ತೆ ಇವರನ್ನು ವಿದ್ಯುತ್‌ಮಂಡಳಿಯು ಟ್ರೇಸರ್ ಹುದ್ದೆಗೆ ಬಡ್ತಿ ನೀಡಿ ಶಿರಸಿಗೆ ವರ್ಗಾಯಿಸುತ್ತಾರೆ. ಇದರಿಂದ ವಿಚಲಿತರಾದ ಹಿರೇಗೌಡರು ನೌಕರಿಗೆ ರಾಜೀನಾಮೆಯಿತ್ತು ಕಲಾಧ್ಯಯನದಲ್ಲಿ ತಲ್ಲೀನರಾಗುವರು.

ನೌಕರಿಗೆ ರಾಜೀನಾಮೆ ನೀಡಿದ್ದರಿಂದ ಮನೆಯವರಿಗೆ ಇವರ ಬಗ್ಗೆ ಬೇಸರವಾಗಿ ಇವರಿಗೆ ಆರ್ಥಿಕ ಸಹಾಯ ಮಾಡುವುದನ್ನು ನಿಲ್ಲಿಸಿಬಿಡುವರು. ಯಾವ ದುರಭ್ಯಾಸಗಳಿಲ್ಲದ, ಹಿತಮಿತ ಭಾಷಿ, ಸೌಮ್ಯ ವಿದ್ಯಾರ್ಥಿಯಾಗಿ ಗುರುತಿಸಿಕೊಂಡ ಇವರು ಹಿರಿಯ ಕಲಾವಿದರ ಮಾರ್ಗದರ್ಶನದಲ್ಲಿ ಕಲಾಧ್ಯಯನ ಮಾಡತೊಡಗುವರು.

ಕಲೆಯ ಗಂಭೀರ ಅಧ್ಯಯನ ಕೈಗೊಂಡ ಹಿರೇಗೌಡರು 1966ರಲ್ಲಿ ಅಂದಿನ ಮೈಸೂರು ರಾಜ್ಯ ಡಿಪ್ಲೋಮ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ರ್‍ಯಾಂಕ್ ಪಡೆಯುವರು. ಹೀಗೆ ಮುಂದುವರೆದು ಮೂರುಸಾವಿರ ಮಠದ ಬಾಲಕಿಯರ ಪ್ರೌಢಶಾಲೆಯಲ್ಲಿ ಅರೆಕಾಲಿಕ ಕಲಾಶಿಕ್ಷಕರಾಗಿ ಸೇರಿ ನಂತರದ ವರ್ಷಗಳಲ್ಲಿ ಆರ್ಟ್ ಮಾಸ್ಟರ್ ಪರೀಕ್ಷೆಯನ್ನು ತೆಗೆದುಕೊಳ್ಳುವರು. ಅಲ್ಲಿಯೂ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದುವರು.

ವೃತ್ತಿ ಜೀವನ

ಕಲಾಶಿಕ್ಷಣವನ್ನು ಮುಗಿಸಿದ ಮೇಲೆ ಮುಂದೇನು ಎನ್ನುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದರೆ, ಮಿಣಜಿಗಿಯವರ ಪ್ರೀತ್ಯಾದರಗಳಿಗೆ ಪಾತ್ರವಾಗಿದ್ದರಿಂದ ಗೌಡರಿಗೆ ಅವರ ಶಾಲೆಯಲ್ಲಿಯೇ ಉಪನ್ಯಾಸಕರ ಹುದ್ದೆಗೆ ಆಹ್ವಾನ ನೀಡುವರು ತುಂಬ ಸಂತೋಷದಿಂದಲೇ 1967ರಲ್ಲಿ ವಿಜಯ ಮಹಂತೇಶ ಲಲಿತಕಲಾ ಮಹಾವಿದ್ಯಾಲಯದಲ್ಲಿ ಕಲಾ ಉಪನ್ಯಾಸಕರಾಗಿ ಸೇರಿಕೊಳ್ಳುವರು. ಕಲಾಶಾಲೆಯಲ್ಲಿ ವಿದ್ಯಾರ್ಥಿಗಳೊಂದಿಗೆ ಬೆರೆತು ಅವರೊಂದಿಗೆ ಇವರೂ ಸಹ ನಗರದ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಸಂತೆಗಳಿಗೆ ಹೋಗಿ ದಿನಂಪ್ರತಿ ನೂರಾರು ಅಂಕನ ಚಿತ್ರಗಳನ್ನು ರಚಿಸಿ, ಮಾರ್ಗದರ್ಶನ ಮಾಡುವುದರೊಂದಿಗೆ ತಾವೂ ಬೆಳೆಯುವುದಕ್ಕೆ ಅನುವು ಮಾಡಿಕೊಳ್ಳುವರು.

ಅಲ್ಲಿ ಅವರು ಕುಂಚಬ್ರಹ್ಮ ಡಾ. ಎಂ.ವಿ. ಮಿಣಜಿಗಿಯವರ ಸೃಜನಶೀಲ ಕಲೆ, ಹಾಲಭಾವಿಯವರ ಜಲವರ್ಣ ತಂತ್ರಗಾರಿಕೆ, ಕೆ.ಬಿ. ಕುಲಕರ್ಣಿಯವರ ಭಾವಚಿತ್ರಗಳು, ಬಿ.ಕೆ. ಹುಬ್ಬಿಯವರ ರೇಖಾಚಿತ್ರಗಳಿಂದ ಸ್ಫೂರ್ತಿ ಪಡೆದು ಅವರಿಂದಲೂ ಪ್ರಭಾವಿತರಾಗುವರು. ಅವರು ಅಕಾಡೆಮಿಕ್ ಪದ್ಧತಿಯನ್ನು ಅಡಿಪಾಯವಾಗಿಟ್ಟುಕೊಂಡು ಭಾರತೀಯ ಪರಂಪರೆ ಹಾಗು ಪಾಶ್ಚಿಮಾತ್ಯ ತಂತ್ರಗಳನ್ನು ಸಮನ್ವಯಗೊಳಿಸಿಕೊಂಡು ವಿವಿಧ ಮಾಧ್ಯಮಗಳಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಲು ಪ್ರಾರಂಭಿಸುವರು.

ಇದೇ ಸಂದರ್ಭದಲ್ಲಿ ದಾವಣಗೆರೆಯಲ್ಲಿ ಸರ್ಕಾರವು ಕಲಾಶಾಲೆ ಪ್ರಾರಂಭಿಸಲು ತೀರ್ಮಾನಿಸುವುದು. ಅದರಂತೆ 1964ರಲ್ಲಿ ಸರ್ಕಾರಿ ಚಿತ್ರಕಲೆ ಮತ್ತು ಕರಕುಶಲ ಶಾಲೆ ಪ್ರಾರಂಭವಾಗುವುದು. ಮುಂದೆ 1967ರಲ್ಲಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನಿಸಿದಾಗ ಇವರು ಅರ್ಜಿ ಹಾಕುವರು. ಎಂ.ವಿ. ಮಿಣಜಿಗಿಯವರೇ ಆಯ್ಕೆ ಸಮಿತಿಯ ವಿಷಯತಜ್ಞರಾಗಿದ್ದರಿಂದ ಇವರ ಅರ್ಹತೆಯನ್ನು ಪರಿಗಣಿಸಿ ಉಪನ್ಯಾಸಕರ ಹುದ್ದೆಗೆ ಆಯ್ಕೆಮಾಡುವರು. ಇದರಿಂದ ಹಿರೇಗೌಡರ ಬದುಕಿಗೆ ಭದ್ರ ನೆಲೆಯೊಂದು ಪ್ರಾಪ್ತವಾಗುತ್ತದೆ.

ಗೌಡರು 1969ರಲ್ಲಿ ಗೃಹಸ್ಥಾಶ್ರಮಕ್ಕೆ ಕಾಲಿರಿಸುವರು. ಇವರ ಧರ್ಮಪತ್ನಿ ದಾಕ್ಷಾಯಿಣಿ ಇವರಿಗೆ ಮೂವರು ಮಕ್ಕಳು. ವೀಣಾ, ವಾಣಿ, ವಿಲಾಸ ಇವರುಗಳೂ ಸಹ ನೃತ್ಯಕಲೆ, ಸಂಗೀತ, ನಾಟಕ ಕಲೆಗಳಲ್ಲಿ ಆಸಕ್ತಿ ತೋರುತ್ತ ತಂದೆಯಂತೆಯೇ ಕಲೆಯಲ್ಲಿ ಆಸಕ್ತಿಗಳಿಗೇನೂ ಕಡಿಮೆ ಇಲ್ಲದಂತೆ ನಡೆದುಕೊಂಡು ಬರುತ್ತಿರುವರು.

ಸರ್ಕಾರಿ ಕಲಾಶಾಲೆಗೆ

ಕಲಾಶಾಲೆಯು ಪ್ರಾರಂಭಿಕ ಹಂತದಿಂದಲೂ ಸರ್ಕಾರವು ಸಾಕಷ್ಟು ಸೌಲಭ್ಯಗಳನ್ನು ಒದಗಿಸುತ್ತಿದ್ದರೂ ಸಹ ವಿದ್ಯಾರ್ಥಿಗಳ ಕೊರತೆಯನ್ನು ಮಾತ್ರ ಎದುರಿಸುತ್ತಿತ್ತು. ಇಂತಹ ಸಂದರ್ಭದಲ್ಲಿ ಕಲಾಶಾಲೆಯ ಸಹೋದ್ಯೋಗಿಗಳ ಜೊತೆಯಲ್ಲಿ ಶಾಲೆಯಲ್ಲಿನ ಶಿಕ್ಷಣದ ಮಹತ್ವವನ್ನು ಸಾರ್ವತ್ರೀಕರಣ ಗೊಳಿಸುವುದಕ್ಕಾಗಿ ಪ್ರಕೃತಿಚಿತ್ರ (ಲ್ಯಾಂಡ್‌ಸ್ಕೇಪ್) ರಚಿಸಲು ಹಳ್ಳಿಗಳಿಗೆ, ಬಸ್‌ನಿಲ್ದಾಣ, ರೈಲ್ವೆ ನಿಲ್ದಾಣಗಳಿಗೆ ವಿದ್ಯಾರ್ಥಿಗಳೊಂದಿಗೆ ಹೋಗಿ ಚಿತ್ರ ರಚಿಸಲು ಪ್ರೇರೇಪಿಸುತ್ತಿದ್ದರು. ಕುತೂಹಲದಿಂದ ವೀಕ್ಷಿಸುತ್ತಿದ್ದ ಸಾರ್ವಜನಿಕರಿಗೆ

ಚಿತ್ರಕಲಾ ಶಾಲೆ ಬಗ್ಗೆ ಕಲಾ ಶಿಕ್ಷಣದ ಮಹತ್ವವನ್ನು ತಿಳಿಯಪಡಿಸುತ್ತಿದ್ದರು. ಇದರಿಂದಾಗಿ, ಆಸಕ್ತ ವಿದ್ಯಾರ್ಥಿಗಳು ಶಾಲೆಯತ್ತ ಆಕರ್ಷಿತರಾಗಿ ಹೆಚ್ಚಿನ ಸಂಖ್ಯೆಯಲ್ಲಿ ಕಲಾಶಾಲೆಗೆ ಪ್ರವೇಶ ಪಡೆದು ಕಲಾಧ್ಯಯನ ಮಾಡತೊಡಗಿದರು.

ಕ್ರಮೇಣ ವಿದ್ಯಾರ್ಥಿಗಳು ರಚಿಸಿದ ಕಲಾಕೃತಿಗಳನ್ನು ಮೈಸೂರು ದಸರ ವಸ್ತುಪ್ರದರ್ಶನದ ಲಲಿತಕಲಾ ವಿಭಾಗಕ್ಕೂ, ಲಲಿತಕಲಾ ಅಕಾಡೆಮಿಯವರು ನಡೆಸುತ್ತಿದ್ದ ವಾರ್ಷಿಕ ಪ್ರದರ್ಶನಗಳಿಗೂ, ಇತರೆ ಸಂಘಸಂಸ್ಥೆಗಳವರು ನಡೆಸುತ್ತಿದ್ದ ಪ್ರದರ್ಶನಗಳಿಗೂ ಕಳುಹಿಸಿ ವಿದ್ಯಾರ್ಥಿಗಳಿಗೆ ಹೆಚ್ಚೆಚ್ಚು ಆಸಕ್ತಿ ಬರುವಂತೆ ಮಾಡುತ್ತಿದ್ದರು. ಇದರಿಂದಾಗಿ ಕಲಾಶಾಲೆಯ ಅನೇಕ ವಿದ್ಯಾರ್ಥಿಗಳು ರಾಜ್ಯ, ರಾಷ್ಟ್ರಮಟ್ಟದ ಪ್ರಶಸ್ತಿಗಳಿಗೆ ಭಾಜನರಾಗಲು, ಹಿರೇಗೌಡರ ಜೊತೆಗೆ ಅವರ ಸಹೋದ್ಯೋಗಿಗಳಾದ ವೈ.ಎಚ್. ಸೂಗೂರ್, ಟಿ.ವಿ. ಗಣೇಶಗುಡಿ, ಕಂಟೆಪ್ಪಗೌಡರ, ಶಂಕರ ಪಾಟೀಲರು ಹಾಗೂ ಜೆ. ಮಲ್ಲಿಕಾರ್ಜುನ ಮುಂತಾದವರು ಕಾರಣರಾಗುತ್ತಾರೆ.

ಸುಮಾರು ಎಂಟು ವರ್ಷಗಳ ಕಾಲ ಉಪನ್ಯಾಸಕರಾಗಿದ್ದ ಹಿರೇಗೌಡರು ಅದೇ ಕಲಾಶಾಲೆಯ ಪ್ರಾಚಾರ್ಯರಾಗಿ 1975ರಲ್ಲಿ ಸರ್ಕಾರದಿಂದ ನೇರ ನೇಮಕಗೊಳ್ಳುವರು. ಆ ಸಂದರ್ಭದಲ್ಲಿ ತಮ್ಮ ಸಹೋದ್ಯೋಗಿಗಳಿಂದ ಸಾಕಷ್ಟು ಕಿರುಕುಳಗಳನ್ನು ಅನುಭವಿಸಿಯೂ ಹುದ್ದೆಯ ಗೌರವ ಕಾಪಾಡುವ ದೃಷ್ಟಿಯಿಂದ ಶಾಲೆಯ ಅಭಿವೃದ್ಧಿಗೆ ಶ್ರಮಿಸುವರು.

ಪ್ರಾಂಶುಪಾಲರಾಗಿ

ಪ್ರಾಂಶುಪಾಲರಾಗಿ ನೇಮಕಗೊಂಡ ನಂತರ, ಅವರ ಅಧ್ಯಾಪನ ಅಧ್ಯಯನಕ್ಕಿಂತ ಆಡಳಿತಕ್ಕೆ ಸೀಮಿತಗೊಳ್ಳುತ್ತದೆ. ತಾಂತ್ರಿಕ ಶಿಕ್ಷಣ ಮಂಡಳಿಯ ಅಧೀನದಲ್ಲಿ ಕೆಲಸ ನಿರ್ವಹಿಸ ಬೇಕಾಗಿದ್ದುದರಿಂದ ಆಗಾಗ್ಗೆ ಅಲ್ಲಿ ನಡೆಯುತ್ತಿದ್ದ ಸಭೆಗಳಿಗೆ ತಪ್ಪದೆ ಹೋಗಲೇಬೇಕಿತ್ತು. ಹೀಗಾಗಿ ಅಧ್ಯಾಪನ ಕಾರ್ಯದಲ್ಲಿ ಅವಕಾಶ ವಂಚಿತರಾಗುತ್ತಿದ್ದುದು ಅವರ ಮನಸ್ಸಿಗೆ ಬೇಸರ ಉಂಟು ಮಾಡುತ್ತಿತ್ತು. ಆದರೂ ಪ್ರಥಮ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಯಥಾದರ್ಶನ ಪ್ರಾಯೋಗಿಕ ಪಾಠ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಆಧುನಿಕ ಸಂಯೋಜನ ಕಲೆಯನ್ನು ಬೋಧಿಸುತ್ತಿದ್ದರು. ಇದರ ಜೊತೆಗೆ ಮೂರು, ನಾಲ್ಕು ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಯೋಜನಾ

ಪ್ರವಾಸಗಳನ್ನು ಹಮ್ಮಿಕೊಳ್ಳುತ್ತಿದ್ದರು. ವಿದ್ಯಾರ್ಥಿಗಳ ಶಿಕ್ಷಣ ಗುಣಮಟ್ಟ ಹೆಚ್ಚಿಸುವ ಸಲುವಾಗಿ ರಾಜ್ಯ ಹಾಗೂ ಹೊರ ರಾಜ್ಯದ ಶ್ರೇಷ್ಠ ಕಲಾವಿದರಿಂದ ಪ್ರಾತ್ಯಕ್ಷಿಕೆ, ವಿಶೇಷ ಉಪನ್ಯಾಸದಂಥ ಹಲವು ಕಾರ್ಯಕ್ರಮಗಳನ್ನು ಅಂತಿಮ ವರ್ಷ ವಿದ್ಯಾರ್ಥಿಗಳಿಗೆ ಏರ್ಪಡಿಸುತ್ತಿದ್ದರು.

ಪ್ರಾರಂಭದಲ್ಲಿ ವಿದ್ಯಾರ್ಥಿಗಳ ಮನವೊಲಿಸಿ ಕಲಾಶಾಲೆಗೆ ಸೇರಿಸುವಂಥ ಪ್ರಸಂಗ ದಿನಕಳೆದಂತೆ ವಿದ್ಯಾರ್ಥಿಗಳೇ ಕಲಾಶಾಲೆಗೆ ಅವರಾಗಿಯೇ ಬರುವಂಥ ವಾತಾವರಣ ನಿರ್ಮಿಸಿದರು.

ಬೆಳಗಾಂ, ಹುಬ್ಬಳ್ಳಿ, ಮೈಸೂರು, ಬೀದರ್, ರಾಯಚೂರು, ಗುಲ್ಬರ್ಗ, ದಕ್ಷಿಣಕನ್ನಡ, ಉತ್ತರಕನ್ನಡ, ಬಿಜಾಪುರಗಳಿಂದ ಅಲ್ಲದೇ ಇನ್ನಿತರ ಸ್ಥಳಗಳಿಂದಲೂ ವಿದ್ಯಾರ್ಥಿಗಳು ಕಾಲೇಜಿಗೆ ಪ್ರವೇಶ ಪಡೆಯುವಂತಾಯಿತು. ಸರ್ಕಾರ ನಿಗದಿಪಡಿಸಿದ ಪ್ರವೇಶಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಪ್ರವೇಶಕೋರಿ ಅರ್ಜಿ ಹಾಕಲಾರಂಭಿಸಿದರು. ಇದರಿಂದಾಗಿ ಪ್ರವೇಶಕ್ಕೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ಅರ್ಹತೆಯ ಆಧಾರದಲ್ಲಿ ಪ್ರವೇಶ ನೀಡುವಂತಹ ನಿಯಮಾವಳಿ ರೂಪಿಸಲಾಯಿತು. ಪ್ರತಿಭಾವಂತರಿಗೆ ಅಧ್ಯಯನಕ್ಕೆ ವಂಚಿತರಾಗದಂತೆ ನೋಡಿಕೊಳ್ಳುವಲ್ಲಿ ಯಶಸ್ವಿಯಾದರು. ಇದು ಇವರ ಆಡಳಿತದ ಮೈಲಿಗಲ್ಲಾಯಿತು.

ಇದಾದನಂತರ, ವಿದ್ಯಾರ್ಥಿಗಳಿಗೆ ವಸತಿ ಸಮಸ್ಯೆ ಉಂಟಾಗುವುದು. ಆಗಲೂ ಸಹ ಗೌಡರು ಸರ್ಕಾರಿ ಡಿ.ಆರ್.ಅರ್. ಪಾಲಿಟೆಕ್ನಿಕ್‌ನ ಹಾಸ್ಟೆಲ್‌ನ ಕಲಾಶಾಲೆಯ ವಿದ್ಯಾರ್ಥಿಗಳಿಗೆ ವಸತಿ ವ್ಯವಸ್ಥೆ ಕಲ್ಪಿಸುವಲ್ಲಿ ಯಶಸ್ವಿಯಾಗುವರು. ವಿದ್ಯಾರ್ಥಿಗಳಿಗೆ ಪೀಠೋಪಕರಣಗಳು, ಪಾಠೋಪಕರಣಗಳು ಹಾಗೂ ಇಂದಿನ ಕಾಲಕ್ಕನುಗುಣವಾಗಿ ಬೇಕಾಗುವ ಪಠ್ಯಕ್ರಮ ಪರಿಷ್ಕರಣೆಯನ್ನು ಮಾಡುವರು.

1992ರಲ್ಲಿ ಕಾಲೇಜಿಗೆ ವಿಶ್ವಬ್ಯಾಂಕಿನಿಂದ ಆರ್ಥಿಕ ಸಹಾಯ ಬರುವುದು. ಆದರೆ ಅದನ್ನು ಸರ್ಕಾರ ಸ್ವಲ್ಪ ತಡೆಹಿಡಿಯುವುದು. ಏಕೆಂದರೆ ಹೊಸದಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಾರಂಭಗೊಂಡ ಕುವೆಂಪು ವಿಶ್ವವಿದ್ಯಾನಿಲಯ ಶೈಶವಾವಸ್ಥೆಯಲ್ಲಿತ್ತು. ವಿಶ್ವವಿದ್ಯಾನಿಲಯದ ಅಭಿವೃದ್ಧಿಗೆ ಅಗತ್ಯವಾದ ಸ್ಥಿರಾಸ್ತಿಯನ್ನು ಯು.ಜಿ.ಸಿ.ಗೆ ತೋರಿಸಬೇಕಿತ್ತು. ಇಲ್ಲವಾದಲ್ಲಿ ವಿಶ್ವವಿದ್ಯಾನಿಲಯಕ್ಕೆ ಯುಜಿಸಿಯಿಂದ ಧನಸಹಾಯ ದೊರಕುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಶಿವಮೊಗ್ಗ ಜಿಲ್ಲೆಯ ಸರ್ಕಾರಿ ಕಾಲೇಜುಗಳು, ದಾವಣಗೆರೆಯ ಸರ್ಕಾರಿ ಇಂಜಿನಿಯರಿಂಗ್

ಕಾಲೇಜು, ಸರ್ಕಾರಿ ಚಿತ್ರಕಲೆ ಮತ್ತು ಕರಕುಶಲ ಶಾಲೆಗಳ ಸಂಪೂರ್ಣ ಆಸ್ತಿ ಸಹಿತ ಎಲ್ಲವನ್ನೂ ಕುವೆಂಪು ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸುವಂತಾಯಿತು. ಇದರಿಂದಾಗಿ 1992ರಿಂದ ತಾಂತ್ರಿಕ ಶಿಕ್ಷಣಮಂಡಳಿಯಿಂದ ನಡೆಯುತ್ತಿದ್ದ ಡಿಪ್ಲೋಮ ಕೋರ್ಸ್‌ಗಳು ಸ್ಥಗಿತಗೊಳ್ಳುತ್ತವೆ. ವಿಶ್ವವಿದ್ಯಾನಿಲಯ ಲಲಿತಕಲಾ ಮಹಾವಿದ್ಯಾಲಯವಾಗಿ ಪರಿವರ್ತನೆಗೊಂಡು, ಪದವಿಮಟ್ಟದ ತರಗತಿಗಳು ಪ್ರಾರಂಭವಾಗುತ್ತವೆ. 1992-93ನೇ ಸಾಲಿನಿಂದಲೇ ವಿಶ್ವವಿದ್ಯಾನಿಲಯವು ಕಲಾಶಾಲೆಯನ್ನು ತನ್ನ ಅಧೀನಕ್ಕೆ ತೆಗೆದುಕೊಂಡು ಕುವೆಂಪು ವಿಶ್ವವಿದ್ಯಾನಿಲಯವು ಲಲಿತಕಲಾ ಮಹಾವಿದ್ಯಾಲಯವೆಂದು ಮರುನಾಮಕರಣ ಮಾಡುತ್ತದೆ. ಸದ್ಯ ಅಲ್ಲಿದ್ದ ಚಿತ್ರಕಲೆ ವಾಣಿಜ್ಯ ಕಲೆಯ ಜೊತೆಗೆ ಹೆಚ್ಚುವರಿಯಾಗಿ ಗ್ರಾಫಿಕ್‌ಕಲೆ, ಶಿಲ್ಪಕಲೆಯ ವಿಭಾಗಗಳನ್ನು ಆರಂಭಿಸಿ ಬಿ.ಎಫ್.ಎ. ತರಗತಿಗಳನ್ನು ಪ್ರಾರಂಭಿಸುವರು ಈ ಹಂತದಲ್ಲಿ ಹಿರೇಗೌಡರ ಪರಿಶ್ರಮ ಬಹುಮುಖ್ಯವಾಗಿತ್ತೆನ್ನಬಹುದು.

ಕಾಲೇಜಿನಲ್ಲಿ ಬೋಧನಾ ತರಗತಿಯ ಕೊಠಡಿಗಳ ಕೊರತೆ ಬಹಳವಾಗಿತ್ತು. ಆಗ ಗೌಡರು ಎರಡು ಫೌಂಡೇಶನ್ ಮತ್ತು ಲಿಥೋಗ್ರಫಿ ಕೊಠಡಿಗಳನ್ನು ವಿಶ್ವವಿದ್ಯಾನಿಲಯದಿಂದ ಮಂಜೂರು ಮಾಡಿಸಿ ಕಟ್ಟಡ ನಿರ್ಮಿಸುವರು. ಆದರೆ, ಅಲ್ಲಿನ ಅರೆಕಾಲಿಕ ಉಪನ್ಯಾಸಕರ ಸಂಬಳ ಕೇವಲ 600/-ರೂ.ಗಳಿದ್ದುದನ್ನು ಈಗ 8000/- ರೂ.ವರೆಗೆ ಹೆಚ್ಚಿಸಿದ ಕೀರ್ತಿ ಇವರದಾಗಿದೆ.

ಇಂದಿನ ಜಾಗತೀಕರಣದ ಸವಾಲುಗಳಿಗೆ ಅಲ್ಲಿನ ವಿದ್ಯಾರ್ಥಿಗಳು ತಯಾರಾಗಬೇಕೆನ್ನುವ ದೃಷ್ಟಿಯಿಂದ ಅಗತ್ಯವಾಗಿ ಬೇಕಾದ ಗಣಕಯಂತ್ರಗಳು, ಅದಕ್ಕೆ ಬೇಕಾದ ಪಠ್ಯಕ್ರಮವನ್ನು ಸಿದ್ಧಗೊಳಿಸುವರು. ಪ್ರಾರಂಭಿಕ ಸಂದರ್ಭಕ್ಕೆ ಆರು ಗಣಕಯಂತ್ರಗಳನ್ನು ವಿಶ್ವವಿದ್ಯಾನಿಲಯವು ಮಂಜೂರು ಮಾಡಿತು. ವಾಣಿಜ್ಯ, ಕಲಾ ವಿದ್ಯಾರ್ಥಿಗಳಿಗೆ ಬೇಕಾದ ಕಂಪ್ಯೂಟರ್ ಅಧ್ಯಯನವೂ ಪ್ರಾರಂಭವಾಗುವುದು.

ವಿದ್ಯಾರ್ಥಿಗಳು ಕೇವಲ ಪಾಠಕ್ಕೆ ಮಾತ್ರ ಸೀಮಿತಗೊಳಿಸದೆ, ಅವರಿಗೆ ಆಗಾಗ್ಗೆ ಹೊರಗಿನ ವಿದ್ವಾಂಸರಿಂದ ಪ್ರಾತ್ಯಕ್ಷಿಕೆ ಉಪನ್ಯಾಸ, ಚರ್ಚಾಗೋಷ್ಠಿಗಳನ್ನು ಏರ್ಪಡಿಸುವಲ್ಲಿನ ಹಿರೇಗೌಡರ ದೂರದೃಷ್ಟಿತ್ವ ಬಹುಮುಖ್ಯವಾಗುತ್ತದೆ. ಇದರಿಂದ ವಿದ್ಯಾರ್ಥಿಗಳು ತಮ್ಮ ಕಲಾಸಕ್ತಿಯನ್ನು ಇಮ್ಮಡಿಗೊಳಿಸಿಕೊಂಡು ಮುಂದುವರೆಯಲು ಸಹಕಾರಿಯಾಗುತ್ತಾರೆ.

ವಿ.ಬಿ. ಹಿರೇಗೌಡರ ರೇಖಾಚಿತ್ರಗಳು

ದೃಶ್ಯಕಲಾವಿದನನ್ನು ಅಳೆಯಲು ಅವನು ಬಿಡಿಸಿದ ರೇಖೆಗಳೇ ಸಾಕು ರೇಖೆಗಳು ದೃಶ್ಯ ಕಲೆಯ ತಾಯಿಬೇರು ಇದ್ದಂತೆ ರೇಖೆಗಳೇ ಚಿತ್ರ, ಶಿಲ್ಪ, ವಾಸ್ತುಶಿಲ್ಪಕ್ಕೆ ಮೂಲ. ಚಿತ್ರವೊಂದರ ನಿರ್ಮಾಣ ರೇಖೆಯಿಂದ ಮೊದಲ್ಗೊಂಡು ವರ್ಣಲೇಪನವಾದ ಮೇಲು ತನ್ನ ಅಸ್ತಿತ್ವವನ್ನು ಸದಾಕಾಲ ಉಳಿಸಿ ಕೊಂಡಿರುತ್ತದೆ.

ರೇಖೆ ಮಾನವ ಇತಿಹಾಸದಷ್ಟೇ ಪ್ರಾಚೀನವಾದುದು, ಮಾನವ ಉಗಮದಿಂದ ರೇಖೆಯೂ ಉಗಮವಾಗುತ್ತದೆ. ರೇಖೆಗಳಿಲ್ಲದ ಮಾಧ್ಯಮವಿಲ್ಲ. ಕಲಾವಿದನೊಬ್ಬನ ಬೌದ್ಧಿಕ ಶ್ರಮ, ದೃಶ್ಯಪ್ರಜ್ಞೆ ಅನಾವರಣಗೊಳ್ಳುವುದೇ ರೇಖಾಚಿತ್ರಗಳ ಮೂಲಕ. ಇಂದಿನ ಸಂದರ್ಭದಲ್ಲಿ ರೇಖಾಚಿತ್ರಗಳ ಮಹತ್ವ ಕಳೆದುಕೊಳ್ಳುತ್ತಾ ಕಲಾಕ್ಷೇತ್ರವನ್ನು ಬಾಧಿಸತೊಡಗಿದೆ. ಇಂದಿನ ಕಲಾವಿದ್ಯಾರ್ಥಿ ಗಳಲ್ಲಿ ಅಷ್ಟೇ ಏಕೆ ಹಿರಿಯ ತಲೆಮಾರಿನ ಕಲಾವಿದರಲ್ಲಿ ರೇಖಾಚಿತ್ರ ಮಾಧ್ಯಮ ಕಡೆಗಣಿಸಲ್ಪಟ್ಟಿದೆ. ಇದಕ್ಕೆ ಮಾರುಕಟ್ಟೆಯ ಬೆಂಬಲವಿಲ್ಲದಿರುವುದೂ ಒಂದು ಕಾರಣವಿದ್ದರೆ, ಜನರು ವರ್ಣಚಿತ್ರಕ್ಕೆ ಕೊಡುವಷ್ಟು ಮಾನ್ಯತೆ ರೇಖಾಚಿತ್ರಗಳಿಗೆ ಕೊಟ್ಟಿಲ್ಲದಿರುವುದೂ ಕಾರಣವಿರಬಹುದು. ಇದರಿಂದಾಗಿ ದೇಶದಲ್ಲಿ ರೇಖಾಚಿತ್ರ ಕಲಾವಿದರು ಅಪರೂಪವಾಗುತ್ತಿದ್ದಾರೆ.

ಗೌಡರು ಕಲಾಶಾಲೆಯ ಪ್ರಾಚಾರ್ಯರಾಗಿದ್ದಾಗ ವಿದ್ಯಾರ್ಥಿಗಳು ಹಂಪಿ, ಬೇಲೂರು, ಬಾದಾಮಿಗಳ ಪ್ರವಾಸದ ಸಂದರ್ಭದಲ್ಲಿ ಪ್ರಾತ್ಯಕ್ಷಿಕೆಗಾಗಿ ಹಲವಾರು ಶಾಯಿಯಿಂದ, ಕ್ರೆಯಾನ್‌ನಿಂದ ಚಿತ್ರಬಿಡಿಸಿ ತೋರಿಸುತ್ತಿದ್ದರು.

ಬಾದಾಮಿಯಲ್ಲಿನ ಹದಿನೆಂಟು ಕೈಗಳನ್ನು ಹೊಂದಿದ ನಟರಾಜವಿಗ್ರಹ ಒಂದನೆಯ ಶೈವಗುಹೆಯಲ್ಲಿದ್ದು, ಅದನ್ನು ಪೂರ್ಣಪ್ರಮಾಣದ ಭಂಗಿಯಲ್ಲಿ ಚಿತ್ರಿಸಿದ್ದಾರೆ ಚಾಳುಕ್ಯ ಶೈಲಿಯ ಆಭರಣ ವಿನ್ಯಾಸಗಳನ್ನು, ವಸ್ತ್ರವಿನ್ಯಾಸಗಳ ಜೊತೆಗೆ ನಟರಾಜನ ಮುಖದ ಗಾಂಭೀರ್ಯತೆಯನ್ನು ಸ್ಫುಟವಾಗಿ ತೋರಿಸಿದ್ದಾರೆ.

ಪಟ್ಟದಕಲ್ಲಿನ ಚಾಳುಕ್ಯ ಪರಿಸರದಲ್ಲಿ ನಿರ್ಮಾಣಗೊಂಡ ದೇಗುಲಗಳ ಶಿಲ್ಪಿಗಳು ವಿಶೇಷವಾಗಿ ಕುಬ್ಜವಾದ ಶೈಲಿಗಳಲ್ಲಿ ರಚನೆಗೊಂಡಿವೆ. ಜನಪದದ ನೆಲೆಯಲ್ಲಿ ನೃತ್ಯಭಂಗಿಯಲ್ಲಿ ರಚನೆಗೊಂಡ ಶಿಲ್ಪಿಗಳ ಚಿತ್ರಗಳಲ್ಲಿ ಕಾಣುವ ಅವರ ಸೂಕ್ಷ್ಮತೆ ಎದ್ದುಕಾಣುತ್ತದೆ. ಅವರ ಪ್ರತಿಯೊಂದು ಚಿತ್ರಗಳಲ್ಲಿಯೂ ಪ್ರಮಾಣಬದ್ಧತೆಯನ್ನು ಕಾಯ್ದುಕೊಂಡಿರುವುದು ವಿಶೇಷ.

ಇಂತಹ ಸಂದರ್ಭದಲ್ಲಿ ವಿ.ಬಿ. ಹಿರೇಗೌಡರು ಕೆಲವೇ ಕೆಲವು ರೇಖಾಚಿತ್ರಕಾರರಲ್ಲಿ ಒಬ್ಬರಾಗಿದ್ದಾರೆ. ಅಲ್ಲದೆ ಇವರು ವರ್ಣಚಿತ್ರ ಕಲಾವಿದರಾಗಿಯೂ ಹೆಸರು ಮಾಡಿದ್ದಾರೆ. ಇವರ ರೇಖಾಚಿತ್ರಗಳಲ್ಲಿ ಕಾಣುವ ತನ್ಮಯತೆ, ಲಾಲಿತ್ಯ ಬಹುಭಾಯೆಗಳು ಅವರ ವರ್ಣಚಿತ್ರಗಳಲ್ಲಿಯೂ ನಾವು ಕಾಣಬಹುದಾಗಿದೆ. ಇದರಿಂದಾಗಿ ಹಿರೇಗೌಡರು ಕರ್ನಾಟಕದ ಕಲಾವಿದರ ಮಧ್ಯೆ ವಿಶಿಷ್ಟ ವ್ಯಕ್ತಿತ್ವದ ಕಲಾವಿದರಾಗಿ ಕಲಾ ಶಿಕ್ಷಕರಾಗಿ, ಜನಸಾಮಾನ್ಯರಲ್ಲಿ ಬಹುವಾಗಿ ಗುರುತಿಸಿಕೊಂಡಿದ್ದಾರೆ.

ಭಾವಚಿತ್ರಗಳು

ಭಾವಚಿತ್ರವೆಂದರೆ ಅದು ಕೇವಲ ಚಿತ್ರವಾಗದೇ ಆ ವ್ಯಕ್ತಿಯ ಭಾವ ಸ್ಪಷ್ಟವಾಗಿ ಪ್ರಕಟವಾದಾಗ ಮಾತ್ರ ಭಾವಚಿತ್ರವಾಗುತ್ತದೆ. ಪ್ರಾಚೀನಕಾಲದಲ್ಲಿ ಆದಿಮಾನವರ, ಪ್ರಾಣಿಗಳ ಪೂರ್ಣ ಚಿತ್ರಗಳೊಂದಿಗೆ ಭಾವಚಿತ್ರಗಳನ್ನು ರಚಿಸಿ, ಮನದ ಭಾವನೆಗಳನ್ನು ಚಿತ್ರದ ಮೂಲಕ ಬಿಂಬಿತವಾಗಿರುವುದನ್ನು ಕಾಣುತ್ತೇವೆ. ನಾಗರಿಕತೆ ಹೆಚ್ಚಿದಂತೆಲ್ಲ, ಭಾವಚಿತ್ರ ಅನೇಕ ಮಾಧ್ಯಮಗಳಲ್ಲಿ ಪ್ರಕಟವಾಗಿರುವುದನ್ನು ನೋಡಿದ್ದೇವೆ. ಒಂದು ಹಂತದಲ್ಲಿ ಕೇವಲ ರಾಜ ಮಹಾರಾಜರಿಗಷ್ಟೇ ಮೀಸಲಾಗಿದ್ದ ಭಾವಚಿತ್ರಗಳು ಕಾಲಕ್ರಮೇಣ ಜನಸಾಮಾನ್ಯರಿಗೂ ಕೈಗೆಟಕುವ ಒಂದು ವಾಣಿಜ್ಯಕಲೆಯಾಗಿ ರೂಪುಗೊಂಡು, ತನ್ನದೇ ಆದ ಪ್ರತ್ಯೇಕ ಅಸ್ತಿತ್ವವನ್ನು ಉಳಿಸಿಕೊಂಡಿದೆ.

ಹಿರೇಗೌಡರು ತಮ್ಮ ಜೀವನದುದ್ದಕ್ಕೂ ಮನುಷ್ಯ ಭಾವಚಿತ್ರಕ್ಕೆ ಸಂಬಂಧಿಸಿದ ಸಾವಿರಾರು ಚಿತ್ರಗಳನ್ನು ರಚಿಸಿದ್ದಾರೆ. ಭಾವಚಿತ್ರದಲ್ಲಿ ಪ್ರಮುಖವಾಗಿ ಶರೀರದ ಕಲ್ಪನೆಯನ್ನು ರೇಖೆಗಳ ಮೂಲಕ ಜೀವ ತುಂಬಿಸಬೇಕು, ಮುಖದ ಮೇಲಿನ ಸ್ನಾಯುಗಳ ಏರಿಳಿತಗಳನ್ನು ಪೂರಕ ದಿಕ್ಕಿನಲ್ಲಿಯೇ ತೋರಿಸುವುದರಿಂದಲೂ ಅವುಗಳ ಮಧ್ಯೆ ನೆರಳನ್ನು ತುಂಬಿಸುವ ಬಗೆಯಿಂದಲೂ ರೇಖಾಚಿತ್ರಕ್ಕೆ ಮೆರಗು ಬರುತ್ತದೆ. ರೇಖಾಚಿತ್ರಗಳನ್ನು ಪೆನ್ಸಿಲ್ ಮಾಧ್ಯಮದಿಂದ, ಕ್ರೆಯಾನ್ ಮಾಧ್ಯಮದಿಂದ ಮತ್ತು ಶಾಯಿಮಾಧ್ಯಮದ ವರೆಗೂ ಚಿತ್ರಣ ಮಾಡಬಹುದಾಗಿದೆ.

ಹಿರೇಗೌಡರು ಪೆನ್ಸಿಲ್ ಮಾಧ್ಯಮದ ಮುಖಾಂತರ ಭಾವಚಿತ್ರಗಳನ್ನು ರಚಿಸಿದಂತೆ ಶಾಯಿ (ಇಂಕ್) ಮಾಧ್ಯಮವನ್ನು ಲೇಖನಿಯ ಮುಖಾಂತರ

ಸಮರ್ಥವಾಗಿ ಬಹಳಷ್ಟು ಚಿತ್ರಗಳನ್ನು ಚಿತ್ರಿಸಿದ್ದುಂಟು. ಇವರ ಚಿತ್ರ ರಚನೆಯ ಬಗ್ಗೆ ಹೇಳುವುದಾದರೆ ಇವರು ಎಳೆಯುವ ಪ್ರತಿಯೊಂದು ಸಣ್ಣಪುಟ್ಟ ರೇಖೆಗಳೂ ಸಹ ಬಹುವೇಗದ ಬೀಸುಗಳನ್ನು ಹೊಂದಿದ್ದು, ಅಲ್ಪ ರೇಖೆಗಳಿಂದಲೇ ಚಿತ್ರ ಪೂರ್ಣಗೊಳಿಸುತ್ತಾರೆ.

ಇನ್ನು ಕ್ರೆಯಾನ್‌ನಿಂದ ಚಿತ್ರಿಸುವ ಸಂದರ್ಭದಲ್ಲಿ ಹಿರೇಗೌಡರು ಛಾಯೆಗಳನ್ನು ದಟ್ಟ, ಮಧ್ಯಮ ಮತ್ತು ತೆಳು ಎಂದು ಮೂರು ಭಾಗಗಳಾಗಿ ವಿಂಗಡಿಸಿಕೊಳ್ಳುವರು. ಮುಖ ಮತ್ತು ಕೇಶಭಾಗದಲ್ಲಿ ಸ್ನಾಯುಗಳನ್ನು ರಚಿಸುವಾಗ ಮತ್ತು ಕುತ್ತಿಗೆ ಕೆಳಗೆ ಉಡುಪುಗಳನ್ನು ಚಿತ್ರಿಸುವ ಮೂರು ಸಂದರ್ಭಗಳಲ್ಲಿಯೂ ಗೌಡರ ಕ್ರೆಯಾನ್ ಕೈಚಳಕ ಅದ್ಭುತವಾಗಿರುತ್ತದೆ. ಭಾವಚಿತ್ರಗಳು ರೂಪದರ್ಶಿಗೆ ಸಂಬಂಧಪಟ್ಟ ಘಟನೆಗಳು ಅಥವ ಅವರ ಕ್ಷೇತ್ರ ಸಾಧನೆಯ ಕುರಿತ ಸೂಚ್ಯವಾದ ವಿನ್ಯಾಸವನ್ನು ರಚಿಸುವುದರ ಮೂಲಕ ವಾಗಿಯೂ ದೃಶ್ಯವನ್ನು ಕಾವ್ಯವಾಗಿಸುವ ಹಾಗು ಭಾವಚಿತ್ರದ ಅಸ್ತಿತ್ವಕ್ಕೆ ವಿಸ್ತೃತ ಅರ್ಥಕೊಡುವ ಪ್ರಯತ್ನವನ್ನು ಮಾಡಿದ್ದಾರೆ. ಅಷ್ಟೇ ಅಲ್ಲದೆ ಪ್ರತಿಯೊಂದು ಭಾವಚಿತ್ರದಲ್ಲೂ ನವೀನ ತಂತ್ರಗಾರಿಕೆಯನ್ನು ಅನ್ವೇಷಿಸುವ ಪ್ರಯೋಗಗಳನ್ನು ಮಾಡುವುದರ ಮೂಲಕ ಪ್ರಯೋಗಶೀಲ ಕಲಾವಿದರಾಗಿದ್ದಾರೆ.

ಪೂರ್ಣ ಭಾವಚಿತ್ರಗಳು

ಭಾವಚಿತ್ರಕ್ಕಿರುವ ಚಾರಿತ್ರಿಕ ಹಿನ್ನೆಲೆ ಪೂರ್ಣ ಭಾವಚಿತ್ರಕ್ಕೂ ಇದೆ. ಹಿಂದಿನಿಂದಲೂ ಪೂರ್ಣ ಭಾವಚಿತ್ರಕ್ಕೆ ರಾಜಾಶ್ರಯಗಳಲ್ಲಿ, ಚರ್ಚುಗಳಲ್ಲಿ, ಸಾಕಷ್ಟು ಪ್ರೋತ್ಸಾಹ ಕಂಡುಬರುತ್ತದೆ. ಪೂರ್ಣ ಭಾವಚಿತ್ರ ರಚನೆಯಲ್ಲಿ ಪಾಶ್ಚಾತ್ಯ ಕಲಾವಿದರಾದ ರೆಂಬ್ರಾಂಟ್, ಲಿಯೋನಾರ್ಡೋ ಡಾ. ವಿನ್ಸಿ, ಭಾರತದ ರಾಜಾ ರವಿವರ್ಮ, ರವೀಂದ್ರನಾಥ ಟಾಗೋರ್, ಕೆ.ಕೆ. ಹೆಬ್ಬಾರ್, ಪಿ.ಸಿ. ಸನ್ಯಾಲ್, ಎಸ್.ಎಂ. ಪಂಡಿತ್, ಬಿ.ಕೆ. ಹುಬ್ಳಿ, ಜೆ.ಎಸ್. ಖಂಡೇರಾವ್, ಇವರುಗಳ ಜೊತೆಯಲ್ಲಿ ವಿ.ಬಿ. ಹಿರೇಗೌಡರೂ ಕೂಡ ಪ್ರಮುಖರಾಗುತ್ತಾರೆ.

ಐವತ್ತು, ಅರುವತ್ತರ ದಶಕಗಳಲ್ಲಿ ಭಾವಚಿತ್ರವನ್ನು ಗಂಭೀರ ಕಲಾಪ್ರಕಾರ ಎಂದು ಗುರುತಿಸಲಾಗುತ್ತಿತ್ತು, ಮೈಸೂರಿನಲ್ಲಿ ನಡೆಯುತ್ತಿದ್ದ ದಸರಾ ಕಲಾಪ್ರದರ್ಶನದಲ್ಲಿ ಭಾವಚಿತ್ರಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗುತ್ತಿತ್ತು. ಆದರೆ ಇಂದಿನ ಸಮಕಾಲೀನ ಸಂದರ್ಭದಲ್ಲಿ ಭಾವಚಿತ್ರವನ್ನು ಗಂಭೀರ

ಕಲಾಪ್ರಕಾರವೆಂದು ಗುರುತಿಸುತ್ತಿಲ್ಲ. ಇದು ವಿಷಾದನೀಯ ಸಂಗತಿಯಾಗಿದೆ. ಇದರಲ್ಲಿ ಸೃಜನಶೀಲತೆಗೆ ಅವಕಾಶವಿಲ್ಲ ಎಂಬ ಕೆಲ ಕಲಾವಿದರ ಅನಿಸಿಕೆಯಿಂದಾಗಿಯೇ ಈ ಕಲೆ ಮಾಯವಾಗುತ್ತಿದೆ.

ಹಿರೇಗೌಡರು ಪೂರ್ಣಭಾವಚಿತ್ರದ ತರಬೇತಿಯನ್ನು ವಿದ್ಯಾರ್ಥಿಗಳಿಗೆ ನೀಡುವ ಸಂದರ್ಭದಲ್ಲಿ ಅನೇಕ ಪ್ರಾತ್ಯಕ್ಷಿಕೆಗಳನ್ನು ನಡೆಸಿಕೊಟ್ಟಿದ್ದಾರೆ. ರೂಪದರ್ಶಿಗೆ ಬಂದ ಬೆಳಕನ್ನು ಲಕ್ಷ್ಯದಲ್ಲಿಟ್ಟುಕೊಂಡು ನೆರಳಿನ ಭಾಗವನ್ನು ಅಡ್ಡ-ಉದ್ದ, ವಕ್ರ, ನೇರ ರೇಖೆಗಳಿಂದ ತುಂಬುತ್ತಾರೆ. ಮುಖದಲ್ಲಿ ಸಂಕ್ಷೇಪಯುಕ್ತ ಮಾಧ್ಯಮ ಛಾಯೆಯನ್ನು ಸಂದರ್ಭಕ್ಕೆ ಅನುಗುಣವಾಗಿ ಹಾಕುತ್ತಾರೆ. ಕೇಶದಲ್ಲಿ ಅಲ್ಲಲ್ಲಿ ಬೆಳಕಿನ ಛಾಯೆಯನ್ನು ತೋರಿಸುತ್ತ ಇಡೀ ರೂಪದರ್ಶಿ ವ್ಯಕ್ತಿತ್ವ ಆಕರ್ಷಕವಾಗಿ ಮೂಡುವಂತೆ ಮಾಡುತ್ತಾರೆ. ಚಿತ್ರ ನೋಡುಗರ ಗಮನಸೆಳೆಯುವಂತೆ ರೂಪದರ್ಶಿ ಧರಿಸುವ ಉಡುಪು, ಕುಳಿತ ಭಂಗಿ, ದೇಹ ಬಾಗುವಿಕೆಗೆ ಪೂರಕವಾಗಿ ಉಡುಪಿನಲ್ಲಿ ಮೂಡಿದ ನೆರಿಗೆಗಳ ರಚನೆಗಳು ಕಲಾವಿದರ ಪ್ರಬುದ್ಧತೆಯನ್ನು ಬಿಂಬಿಸುತ್ತವೆ. ರೂಪದರ್ಶಿಯ ಅಂಗಾಂಗ ರಚನೆ, ಅವರು ಕುಳಿತ ಪೀಠ ಅದಕ್ಕೆ ಪೂರಕವಾದ ಹಿನ್ನೆಲೆಯಲ್ಲಿ ರಚನೆಗೊಳ್ಳುತ್ತಿದ್ದ ದೃಶ್ಯವು ಭಾವಚಿತ್ರಕ್ಕೆ ವಿಶೇಷ ಮೆರಗು ನೀಡುತ್ತವೆ.

ಹಿರೇಗೌಡರು ಕಲಾಕೃತಿ ರಚನೆಗೆ ಎಲ್ಲಾ ವಯೋಮಾನದವರನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದುದು ವಿಶೇಷ. ಎಲ್ಲಾ ರೂಪದರ್ಶಿಗಳಿಗೂ ದೇಹದ ಒಟ್ಟು ಭಾಗದಲ್ಲಿ ಕಾಣುವ ರೇಖಾ ನೈಪುಣ್ಯತೆ, ಪಕ್ವತೆ, ಮುಖದಲ್ಲಿ ಅಲ್ಪಪ್ರಮಾಣದ ಛಾಯೆ ಆವರಿಸಿದ್ದರೂ ವೃದ್ಧಾಪ್ಯದ, ತರುಣಿಯ, ಯುವಕರದ್ದೇ ಆದರೂ ಸಾಂದರ್ಭಿಕವಾಗಿ ಅಲ್ಲಲ್ಲಿ ದಟ್ಟ ಛಾಯೆಯನ್ನು ಬಳಸುವುದರ ಮೂಲಕ ಅವರವರ ವಯೋಮಾನವನ್ನು ಅವರ ಕಲಾಕೃತಿಗಳಲ್ಲಿ ಗುರುತಿಸಬಹುದಾಗಿರುತ್ತದೆ. ಅಲ್ಲದೆ ಮಾನವ ಅಂಗಾಂಗಶಾಸ್ತ್ರದ ಪರಿಮಿತಿಗೆ ಒತ್ತುಕೊಟ್ಟು ಚಿತ್ರ ರಚಿಸುತ್ತಾರೆ. ಅದೇ ಅವರ ವಿಶೇಷ ಕೈಚಳಕ.

ಹಿರೇಗೌಡರು ಕಛೇರಿಯಲ್ಲಿರಲಿ, ಮನೆಯಲ್ಲಿರಲಿ ಅಥವಾ ಪ್ರಯಾಣಿಸುತ್ತಿರಲಿ, ಈ ಎಲ್ಲಾ ಸಂದರ್ಭದಲ್ಲಿಯೂ ರೇಖಾಚಿತ್ರಗಳನ್ನು ರಚಿಸುವಲ್ಲಿ ಕ್ರಿಯಾಶೀಲರಾಗಿರುತ್ತಾರೆ. ಒಮ್ಮೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಸಂದರ್ಭದಲ್ಲಿ ಟಿಬೆಟಿಯನ್ ಮಹಿಳೆಯು ಧ್ಯಾನಾಸಕ್ತಳಾಗಿದ್ದ ಸಂದರ್ಭದಲ್ಲಿ ಚಿತ್ರ ಬಿಡಿಸುವರು. ಆ ಚಿತ್ರದಲ್ಲಿ ಯಾವುದೇ ಬಗೆಯ ಛಾಯೆಗಳನ್ನು ಕಾಣದಿದ್ದರೂ ಛಾಯೆ ಇರಬಹುದಾದ

ಸ್ಥಳದಲ್ಲಿ ಕೇವಲ ರೇಖೆಗಳಿಂದ ಛಾಯೆಯನ್ನು ತೋರಿಸುತ್ತಿದ್ದರೂ, ಭಾವಕ್ಕೆ ಯಾವುದೇ ಬಗೆಯ ಕೊರತೆ ಕಾಣದಂತೆ, ಅವಳು ತೊಟ್ಟ ಉಡುಪಿನಲ್ಲಿ ದಟ್ಟ ಛಾಯೆಗಳು ಅಲ್ಲಲ್ಲಿ ಮೂಡಿದ ಬಗೆಯಿಂದಾಗಿ ಗಾಂಭೀರ್ಯದ ಭಾವವನ್ನು ಆ ಚಿತ್ರದಲ್ಲಿ ನೋಡಬಹುದಾಗಿದೆ. ಆ ಮಹಿಳೆಯ ಹಿನ್ನೆಲೆಯಲ್ಲಿ ರೈಲಿನ ಕಿಡಕಿ, ಕುಳಿತಿರುವ ಪೀಠ ತೋರಿಸುವುದರೊಂದಿಗೆ ಮೇಲ್ಭಾಗದಲ್ಲಿ ಅವಳ ಧಾರ್ಮಿಕ ಬದುಕಿನ ಹೆಜ್ಜೆಗಳು ಹಿರೇಗೌಡರ ರೇಖಾಲಾಲಿತ್ಯ ಗೌಣವಾಗಿ ಕಂಡುಬಂದು ರೂಪದರ್ಶಿಗೆ ಹೆಚ್ಚು ಪ್ರಾಧಾನ್ಯತೆ ನೀಡಿರುವುದು ವಿಶೇಷವಾಗಿದೆ.

ಹಿರೇಗೌಡರ ಪ್ರತಿ ಚಿತ್ರದಲ್ಲೂ ಕಾಣುವ ಸ್ಪಷ್ಟ ಗುಣವೆಂದರೆ, ವಯೋಮಾನಕ್ಕೆ ತಕ್ಕುದಾದ ಭಾವ ಮತ್ತು ಅಂಗಾಂಗ ರಚನೆಗಳು ಗಮನಾರ್ಹ ವೆನಿಸುತ್ತದೆ. ಆಯಾ ವಯೋಮಾನದವರ ಅಂಗಾಂಗಗಳಿಗೆ ಭಾವಗಳಿಗೆ ಪೂರಕವಾದ ರೇಖೆ ಮತ್ತು ಛಾಯೆಗಳನ್ನು ಮೂಡಿಸುವಾಗ ಪೆನ್ಸಿಲ್, ಸ್ಕೆಚ್‌ಪೆನ್‌ನಿಂದ ಅಥವಾ ಪೆನ್ನನ್ನು ತಾಂತ್ರಿಕವಾಗಿ ಬಳಸುವ ಬಗೆಯನ್ನು ಚೆನ್ನಾಗಿ ಕಂಡುಕೊಂಡಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ಭಾವಚಿತ್ರ ರಚಿಸುವ ಸಂದರ್ಭದಲ್ಲಿ ರೂಪದರ್ಶಿಯ ಪ್ರಮುಖವಾದ ಅಂಶಗಳನ್ನು ಹಾಗೂ ಅದಕ್ಕೆ ಪೂರಕವಾದ ಅಂಗಾಂಗಗಳ ರಚನೆ, ವಸ್ತ್ರವಿನ್ಯಾಸಗಳಿದ್ದರೆ ಮಾತ್ರ ನೈಜತೆಗೆ ಹತ್ತಿರವಾಗಿ ಭಾವಚಿತ್ರ ಚೆನ್ನಾಗಿ ಮೂಡಿಬರಲು ಸಾಧ್ಯ. ಹಿರೇಗೌಡರ ಕುಂಚದಲ್ಲಿ ಸಾವಿರಾರು ಭಾವಚಿತ್ರಗಳು, ಜಲವರ್ಣ ಹಾಗೂ ತೈಲವರ್ಣಗಳಲ್ಲಿ ಮೂಡಿಬಂದಿವೆ. ಪ್ರಮುಖವಾಗಿ ಇವರು ರಚಿಸಿದ ಧಾರವಾಡದ ಮುರುಘಾ ಮಠದ ಶ್ರೀಗಳು, ರಾಮಕೃಷ್ಣಪರಮಹಂಸ, ಬಸವಣ್ಣ, ನೀಲಾಂಬಿಕೆ, ಸಿದ್ಧಗಂಗಾಶ್ರೀಗಳು, ಚಿತ್ರದುರ್ಗದ ಮುರುಘರಾಜೇಂದ್ರ ಶರಣರು, ಚೇಳಗುರುಕಿ ಎರ್ರಿತಾತನವರ ಸರಣಿಚಿತ್ರಗಳು, ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿಗಳು, ಜಿ.ಡಿ. ಬಿರ್ಲಾ, ಪಿ.ಆರ್. ತಿಪ್ಪೇಸ್ವಾಮಿ, ಸೋಮಶೇಖರಸಾಲಿ ಮುಂತಾದವರ ಹಲವಾರು ಭಾವಚಿತ್ರಗಳು ಪ್ರಸಿದ್ಧಿ ಪಡೆದಿವೆ.

ಪ್ರಕೃತಿ ಚಿತ್ರಗಳು

ಕಲಾವಿದನಿಗೆ ನಿಸರ್ಗದ ಯಾವ ಜಾಗದಲ್ಲಿ ಕುಳಿತರೂ ಒಂದಲ್ಲ ಒಂದು ಬಗೆಯ ದೃಶ್ಯ ಚೌಕಟ್ಟುಗಳು ಕಾಣುತ್ತವೆ. ಅಂತಹ ಚೌಕಟ್ಟಿನಲ್ಲಿ ಕಾಣುವ ಪ್ರಕೃತಿಯನ್ನು ಕಾಗದದಲ್ಲಿ ಮೂಡಿಸಿದರೆ ಮಾತ್ರ ಒಂದು ದೃಶ್ಯಕಾವ್ಯವಾಗಿ

ಹೊರಹೊಮ್ಮುತ್ತದೆ ಎಂಬುದಕ್ಕೆ ಅವರ ನಿಸರ್ಗ ಚಿತ್ರಗಳನ್ನು ಗಮನಿಸಿದರೆ ಗೊತ್ತಾಗುತ್ತದೆ.

ಪ್ರಕೃತಿಚಿತ್ರಣ ರಚನೆಯಿಂದ ಆಗುವ ಪ್ರಮುಖ ಪ್ರಯೋಜನ ಯಥಾದರ್ಶನ ಪ್ರಜ್ಞೆ, ಈ ಯಥಾದರ್ಶನ ಪ್ರಜ್ಞೆ ಕಲಾ ವಿದ್ಯಾರ್ಥಿಗಳಿಗೆ ಅಥವ ವೃತ್ತಿಪರ ಕಲಾವಿದರಿಗೆ ಇಲ್ಲದಿದ್ದಲ್ಲಿ ಅವರು ಉತ್ತಮ ಕಲಾಕೃತಿ ರಚನೆ ಮಾಡಲು ಸಾಧ್ಯವಿಲ್ಲ. ಏಕೆಂದರೆ ಪ್ರಕೃತಿಯಲ್ಲಿ ವಸ್ತುಗಳ ಹಿನ್ನೆಲೆ ಕಾಣುವ ರೀತಿ ಮುಂದುಗಡೆ ಕಾಣುವ ರೀತಿಯನ್ನು ತಿಳಿದಾಗ ಮಾತ್ರ ಒಂದು ಉತ್ತಮ ಚಿತ್ರ ರಚಿಸಲು ಸಾಧ್ಯವಾಗುತ್ತದೆ. ಈ ಕಾರಣದಿಂದ ಪ್ರಕೃತಿ ಚಿತ್ರಗಳನ್ನು ನಿರಂತರವಾಗಿ ರಚಿಸಬೇಕೆನ್ನುವ ಹಿರೇಗೌಡರು ತಮ್ಮ ಜೀವನದುದ್ದಕ್ಕೂ ಸಾವಿರಾರು ಪ್ರಕೃತಿ ಚಿತ್ರಗಳನ್ನು ಮೂರು ಮಾಧ್ಯಮಗಳಲ್ಲಿ ರಚಿಸಿದ್ದಾರೆ. 1. ಪೆನ್ಸಿಲ್ ಮಾಧ್ಯಮ, 2. ಶಾಯಿ ಮಾಧ್ಯಮ (ಇಂಕ್‌ಪೆನ್) 3. ಕ್ರೆಯಾನ್ ಮಾಧ್ಯಮ. ಪೆನ್ಸಿಲ್ ಮಾಧ್ಯಮದಿಂದ (ಲೆಡ್‌ಪೆನ್ಸಿಲ್) ಹಿರೇಗೌಡರು ಬಾಬಾಬುಡನ್‌ಗಿರಿಯ ಪರ್ವತ ಶ್ರೇಣಿಯಲ್ಲಿ ಮೋಡ ಮುಸುಕಿದ ವಾತಾವರಣವನ್ನು ಸಮರ್ಥವಾಗಿ ಗ್ರಹಿಸಿ ಚಿತ್ರಿಸಿದ್ದಾರೆ. ಅದರಲ್ಲಿ ರೇಖೆಗಳಿಗೆ ಪ್ರಾಧಾನ್ಯತೆ ಇಲ್ಲದಿದ್ದರೂ ಹೆಚ್ಚಾಗಿ ಚಿತ್ರದಲ್ಲಿ ಉಬ್ಬುತಗ್ಗುಗಳನ್ನು ಛಾಯೆಗಳಿಂದಲೇ ಪೂರ್ಣಗೊಳಿಸಿದ್ದಾರೆ. ಶಾಯಿ ಮಾಧ್ಯಮದಿಂದ ಹಂಪಿ, ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳ ಚಿತ್ರಗಳನ್ನು ಬಹಳ ಚೆನ್ನಾಗಿ ರಚಿಸಿದ್ದಾರೆ. ಹಂಪಿಯ ಬಂಡೆಕಲ್ಲುಗಳ ಚಿತ್ರ ಬಿಡಿಸುವಾಗ ಕಾಗದದಲ್ಲಿ ಬೆಳಕಿನ ಛಾಯೆಯನ್ನು ಹಾಗೆಯೇ ಬಿಟ್ಟು ನೆರಳಿನ ಭಾಗದಲ್ಲಿ ಮಾತ್ರ ರೇಖೆಗಳಿಂದ ತುಂಬಿಸುವ ಕ್ರಮ ಬಂಡೆಗಳ ಬುಡದಲ್ಲಿನ ಗಿಡಗಂಟೆಗಳು, ಬಂಡೆಗಳ ಮೇಲಿನ ಛಾಯೆಯನ್ನು ಚಿಕ್ಕ ಚಿಕ್ಕ ರೇಖೆಗಳಿಂದ ಒಂದರ ಮೇಲೆ ಒಂದರಂತೆ ಎಳೆಯುವ ರೀತಿ ಹಾಗೂ ಚಿತ್ರ ಸಂಯೋಜನೆಯಲ್ಲಿ ಆಧುನಿಕ ಚಿಂತನಾಕ್ರಮವನ್ನು ಅನುಸರಿಸುವ ಅವರ ಜಾಣ್ಮೆ ಮೆಚ್ಚತಕ್ಕದ್ದು.

ಕ್ರೆಯಾನ್ ಮಾಧ್ಯಮದಲ್ಲಿ ರಚಿಸುವಲ್ಲಿಯೂ ಗೌಡರು ನಿಷ್ಣಾತರಾಗಿದ್ದಾರೆ. ಲೇಖನಿಯಂತಹ ಮೊನಚನ್ನು ಹೊಂದಿರದ ಕ್ರೆಯಾನ್‌ನಿಂದ ಹಂಪಿಯ ಮಹಾನವಮಿ ದಿಬ್ಬ, ಪುಷ್ಕರಣಿ, ಕಮಲಮಹಲ್, ಕಾವಲುಗೋಪುರ, ವಿಶೇಷವಾಗಿ ರಾಜಮನೆತನಕ್ಕೆ ಸಂಬಂಧಿಸಿದ ಅರಮನೆ ಪರಿಸರದಲ್ಲಿರುವ ಸ್ಮಾರಕಗಳ ಚಿತ್ರಗಳಲ್ಲಿ ಕಾಣುವ ಅವರ ತೀಕ್ಷ್ಣತೆಯ ಪ್ರಬುದ್ಧ ಬಳಕೆ ಅಲ್ಲಿ ಕಾಣಬಹುದಾಗಿದೆ.

ಯಾವುದೇ ಪ್ರತಿಮೆ, ವ್ಯಕ್ತಿ ಅಥವ ನಿಸರ್ಗಚಿತ್ರದ ನಿರ್ಮಾಣದಲ್ಲಿ ಮೂಲ ವಸ್ತುವನ್ನು ಯಥಾವತ್ತಾಗಿ ಚಿತ್ರಿಸುವುದು ಮಾತ್ರವೇ ಸತ್ಯವನ್ನು ನಿರೂಪಿಸುವ ಲಕ್ಷಣವಲ್ಲ. ವಿಶಿಷ್ಟವಾದ ಚಿನ್ಹೆ, ಸಂಕೇತಗಳ ಮೂಲಕ, ಆಕಾರ ಬಣ್ಣಗಳ ಮೂಲಕ ಕಲಾಕೃತಿಯನ್ನು ರಚಿಸಿ, ಆ ಮೂಲಕ ಪ್ರೇಕ್ಷಕರ ಮನಸ್ಸಿನಲ್ಲಿ ಅಪೇಕ್ಷಿತ ಭಾವನೆಗಳನ್ನು ಜಾಗೃತಗೊಳಿಸಬೇಕು ಮತ್ತು ಇದರಿಂದ ಶೃಂಗಾರ, ಹಾಸ್ಯ ಮುಂತಾದ ನವರಸಗಳ ಅನುಭವ ಉಂಟುಮಾಡುವಂತಿರಬೇಕು. ಈ ಕಾರಣದಿಂದ ಹಿರೇಗೌಡರು ತಮ್ಮ ಕಲಾಕೃತಿಗಳಲ್ಲಿ ಈ ಸಂಕೇತಗಳನ್ನು ಹೇರಳವಾಗಿ ಸೇರಿಸಿಕೊಂಡು ಆಧುನಿಕ ಕಲಾಕೃತಿಗಳನ್ನು ರಚಿಸಿದ್ದಾರೆ.

ಚಿತ್ರಸಂಯೋಜನೆಯ ಮೂಲ ತತ್ವಗಳಾದ ರೇಖೆ, ಆಕೃತಿ, ವರ್ಣ, ವರ್ಣವಿನ್ಯಾಸ ಮತ್ತು ಸ್ಥಳಾವಕಾಶ ಮುಂತಾದವುಗಳ ಅರ್ಥವ್ಯಾಪ್ತಿಗಳನ್ನು ಐಕ್ಯತೆ, ಸಾಮರಸ್ಯತೆ, ಸಮತೂಕ, ಲಯಬದ್ಧತೆ ಮುಂತಾದ ಚಿತ್ರಸಂಯೋಜನೆಯ ನಿಯಮಗಳನ್ನು ತಿಳಿಯದೆ, ಚಿತ್ರ ಬಿಡಿಸಿದರೆ ಆ ಚಿತ್ರ ಪರಿಪೂರ್ಣವೆನಿಸುವುದಿಲ್ಲ. ಚಿತ್ರಸಂಯೋಜನೆ ಸಾಂಪ್ರದಾಯಿಕವಾಗಿರಲಿ, ಆಧುನಿಕವಾಗಿರಲಿ, ಸಮಕಾಲೀನ ಕೃತಿಯಾಗಿರಲಿ ಅದರಲ್ಲಿ ಚಿತ್ರಸಂಯೋಜನೆಯ ಮೂಲತತ್ವಗಳಾಗಲಿ, ನಿಯಮಗಳಾಗಲಿ, ನಿಬಂಧನೆಗಳಾಗಲಿ ಇಲ್ಲದಿದ್ದಲ್ಲಿ ಅದು ಪರಿಪೂರ್ಣ ಕಲಾಕೃತಿಯಾಗಲು ಸಾಧ್ಯವಿಲ್ಲ ಅದರಲ್ಲೂ ಕರ್ನಾಟಕದಲ್ಲಿ 1960ರಿಂದ ಈಚೆಗೆ ಆಧುನಿಕ ಕಲೆ ತಳಊರಿದ ನಂತರ ಸಂಯೋಜನೆಯಲ್ಲಿ ಅತ್ಯಂತ ವಿಭಿನ್ನ ರೀತಿಯ ಪ್ರಯೋಗಗಳು ನಡೆಯುತ್ತಿವೆ. ಅಂತಹ ಕಲಾವಿದರ ಮಧ್ಯೆಯೂ ಹಿರೇಗೌಡರು ತಮ್ಮ ಮೂಲ ತತ್ವಗಳನ್ನು ಬಿಡದೆ ಚಿತ್ರೀಕರಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ.

ಹಿರೇಗೌಡರು ಕೇವಲ ಕಲಾಶಿಕ್ಷಕರಾಗಿ, ಚಿತ್ರಕಲಾವಿದರಾಗಿ ಮಾತ್ರ ಗುರುತಿಸಿಕೊಳ್ಳದೆ ಒಳ್ಳೆಯ ಆಡಳಿತಗಾರರಾಗಿಯೂ ಗುರುತಿಸಿಕೊಂಡಿದ್ದಾರೆ.

ದಾವಣಗೆರೆಯಿಂದ ಹಂಪಿಗೆ ಪಯಣ

ದಾವಣಗೆರೆಯ ಕಲಾಶಾಲೆಯಿಂದ ನಿವೃತ್ತಿಯ ನಂತರ ಗೌಡರಿಗೆ ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಆಹ್ವಾನ ಬರುತ್ತದೆ. ಅಲ್ಲಿ ಸ್ನಾತಕೋತ್ತರ ಪದವಿಯಲ್ಲಿ ದೃಶ್ಯಕಲಾ ವಿಭಾಗವನ್ನು ಪ್ರಾರಂಭಿಸಿ ಒಂದು ವರ್ಷದ ನಂತರ ಮೈಸೂರಿಗೆ ಪ್ರಯಾಣ ಬೆಳೆಸುತ್ತಾರೆ.

ಹಂಪಿಯಿಂದ ಮೈಸೂರಿಗೆ ಪಯಣ

ಕಲಾವಿದರಿಗೆ ನಿವೃತ್ತಿ ಎಂಬುದೇ ಇಲ್ಲ. ಹೀಗಾಗಿ ಮೈಸೂರಿನಲ್ಲಿ ದುರ್ದಂಡೇಶ್ವರ ಮಠದ ಶ್ರೀ ತ್ರಿನೇತ್ರ ಮಹಾಂತಸ್ವಾಮಿಗಳು ಸ್ಥಾಪಿಸಿದ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದ ದೂರಶಿಕ್ಷಣದ ನೀತಿಯಲ್ಲಿ ಕಲಾಶಿಕ್ಷಣಕ್ಕೆ ನೀಡುತ್ತಿರುವ ಡಿ.ಎಂ.ಎಸ್. ಲಲಿತಕಲಾ ವಿದ್ಯಾಲಯಕ್ಕೆ ಒಬ್ಬ ಪ್ರಾಚಾರ್ಯರ ಹುಡುಕಾಟದಲ್ಲಿದ್ದ ಸಮಯದಲ್ಲಿ ದಾವಣಗೆರೆ ಕಲಾ ಕಾಲೇಜಿನಿಂದ ನಿವೃತ್ತಿಹೊಂದಿ ಹಂಪಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ವಿಷಯ ಸ್ವಾಮೀಜಿಯವರ ಕಿವಿಗೆ ಬೀಳುತ್ತದೆ. ತಕ್ಷಣವೇ ಹಿರೇಗೌಡರನ್ನು ಸಂಪರ್ಕಿಸಿ ತಮ್ಮ ಸಂಸ್ಥೆಗೆ ಬಂದು ಸೇವೆ ಸಲ್ಲಿಸಲು ಆಹ್ವಾನಿಸುತ್ತಾರೆ. ಇವರಿಗೆ ಮೈಸೂರಿಗೆ ಬರಲು ಇಷ್ಟವಿಲ್ಲದಿದ್ದರೂ ಸ್ವಾಮೀಜಿಯವರ ಬಲವಂತಕ್ಕೆ 2005ರ ಸೆಪ್ಟೆಂಬರ್ ತಿಂಗಳಿನಲ್ಲಿ ಬಂದು ಗೌರವ ಡೀನ್ ಹುದ್ದೆ ಅಲಂಕರಿಸಿ ಸೇವೆ ಸಲ್ಲಿಸುತ್ತಿದ್ದಾರೆ.

ಹಿರೇಗೌಡರು ಬಂದ ಸಂದರ್ಭದಲ್ಲಿ ಲಲಿತಕಲಾ ವಿದ್ಯಾಲಯದಲ್ಲಿ ಕೇವಲ 90 ವಿದ್ಯಾರ್ಥಿಗಳಿದ್ದರು. ಇವರ ಕೆಲಸದ ಚತುರತೆಯಿಂದಾಗಿ ಇಂದು 450ಕ್ಕೂ ಹೆಚ್ಚು ವಿದ್ಯಾರ್ಥಿಗಳು ಚಿತ್ರಕಲಾ ವ್ಯಾಸಂಗ ಮಾಡುತ್ತಿದ್ದಾರೆ. ಇವರ ನೇತೃತ್ವದಲ್ಲಿ ಈಗ ಮೂರು ಬ್ಯಾಚ್ ವಿದ್ಯಾರ್ಥಿಗಳು ಪದವಿ ತರಗತಿ ಮುಗಿಸಿ ವಿದ್ಯಾಲಯದಿಂದ ಹೊರಹೋಗಿದ್ದಾರೆ.

2010ನೇ ಸಾಲಿನಿಂದ ವರ್ಣಕಲೆ ಮತ್ತು ಅನ್ವಯಿಕ ಕಲೆಯಲ್ಲಿ ಸ್ನಾತಕೋತ್ತರ ಪದವಿಗಳನ್ನು ಪ್ರಾರಂಭಿಸುತ್ತಿರುವುದು ಇವರ ನೇತೃತ್ವದಲ್ಲಿಯೇ. ಈಗ ಹಿರೇಗೌಡರಿಗೆ 68 ವರ್ಷದ ಪ್ರಾಯ. ಅವರಲ್ಲಿ ಇನ್ನೂ ಮೂವತ್ತೆಂಟರ ಹರೆಯದ ಉತ್ಸಾಹ. ನಿಜಕ್ಕೂ ಕಿರಿಯ ವಯಸ್ಸಿನ ಕಲಾವಿದರು ನಾಚಿಸುವಂತೆ ಕೆಲಸ ನಿರ್ವಹಿಸುತ್ತಿರುವ ಇವರಿಂದ ಕರ್ನಾಟಕಕ್ಕೆ ಇನ್ನೂ ಹೆಚ್ಚಿನ ಕಲಾ ಸೇವೆ ದಕ್ಕಲೆಂದು ಆಶಿಸುತ್ತೇನೆ.



ವ್ಯಕ್ತಿ ಪರಿಚಯ

ಪ್ರೊ. ವಿ. ಬಿ. ಹಿರೇಗೌಡರ್

ಜನನ	:	ಗುಡಿಗೇರಿ, ಧಾರವಾಡ ಜಿಲ್ಲೆ, ಏಪ್ರಿಲ್ 1, 1943
ಶಿಕ್ಷಣ	:	ಅ) ಡಿ.ಟಿ.ಸಿ. – 1963
		ಆ) ಲಲಿತಕಲೆಯಲ್ಲಿ ಡಿಪ್ಲೋಮಾ – 1966 (ರಾಜ್ಯಕ್ಕೆ ಪ್ರಥಮ ಸ್ಥಾನ)
		ಇ) ಆರ್ಟ್ ಮಾಸ್ಟರ್ ಪದವಿ – 1967
ಉದ್ಯೋಗ		
1967–1975	:	ದಾವಣಗೆರೆ, ಸರಕಾರಿ ಕಲೆ ಮತ್ತು ಕರಕುಶಲ ಮಹಾ ವಿದ್ಯಾಲಯದಲ್ಲಿ ಉಪನ್ಯಾಸಕರಾಗಿ 8 ವರುಷ ಸೇವೆ
1975–2003	:	ವಿಶ್ವವಿದ್ಯಾಲಯ ಲಲಿತಕಲಾ ಮಹಾವಿದ್ಯಾಲಯ ದಾವಣಗೆರೆ ಪ್ರಾಂಶುಪಾಲರಾಗಿ ಆಯ್ಕೆಗೊಂಡು ನಿರಂತರವಾಗಿ 27 ವರುಷ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.

ಚಿತ್ರಕಲಾ ಶಿಕ್ಷಣದಲ್ಲಿ ಇತರ ಸೇವಾ ಗೌರವಗಳು

1975–2003	:	ತಾಂತ್ರಿಕ ಪರೀಕ್ಷಾ ಮಂಡಳಿಯ ಅಡಿಯಲ್ಲಿ ಲಲಿತ ಕಲಾಪರೀಕ್ಷಾ ಮಂಡಳಿಯ ಅಧ್ಯಕ್ಷರು
1984	:	ಕರ್ನಾಟಕ ರಾಜ್ಯ ಉನ್ನತ ಕಲಾ ಶಿಕ್ಷಣದಡಿಯಲ್ಲಿ ಚಿತ್ರಕಲಾ ವಿದ್ಯಾರ್ಥಿಗಳಿಗಾಗಿ ಕಲಾ ಇತಿಹಾಸ ಪುಸ್ತಕ ನಿರ್ಮಾಣ ಸಮಿತಿಯ ಅಧ್ಯಕ್ಷರು

1975–1979	:	ಸಾರ್ವಜನಿಕ ಶಿಕ್ಷಣ ಇಲಾಖೆಯ ಅಡಿಯಲ್ಲಿ ಕಲೆ ಮತ್ತು ಕರಕುಶಲ ಮಂಡಳಿಯ ಸದಸ್ಯರು
1975–1985	:	ಕರ್ನಾಟಕ ರಾಜ್ಯ ತಾಂತ್ರಿಕ ಶಿಕ್ಷಣದ ಕೇಂದ್ರೀಯ ಪರೀಕ್ಷಾ ಮಂಡಳಿಯ ಸದಸ್ಯರು
1978	:	ಕರ್ನಾಟಕ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಡಿಯಲ್ಲಿ ಲಲಿತಕಲೆ ಮತ್ತು ಅನ್ವಯಿಕ ಕಲೆಯ ಪಠ್ಯಕ್ರಮ ರಚನಾ ಸಮಿತಿಯ ಅಧ್ಯಕ್ಷರು
1975–ಇಂದಿನವರೆಗೆ	:	ಕರ್ನಾಟಕ ಆರ್ಕಿಯಾಲಜಿ ಮತ್ತು ಮ್ಯೂಜಿಯಂ ನಿರ್ದೇಶನಾಲಯದಡಿಯಲ್ಲಿ "ಚಪ್ಪುದಿರ ಪೊನ್ನಪ್ಪ ರಾಜಾರಾಮ ಸ್ಮಾರಕ" ದತ್ತಿನಿಧಿಯ ಶಿಲ್ಪಕಲಾ ವಿದ್ಯಾರ್ಥಿ ವೇತನ ಸಮಿತಿಯ ಸದಸ್ಯರು
1980–1983 ಹಾಗೂ 1987–1990	:	ಎರಡು ಅವಧಿಗೆ ಕರ್ನಾಟಕ ಲಲಿತಕಲಾ ಆಕಾಡೆಮಿಯ ಸದಸ್ಯರು
1981	:	ಮೈಸೂರು ವಿಶ್ವವಿದ್ಯಾನಿಲಯ ಮಹಿಳಾ ಶಿಕ್ಷಣ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಲಲಿತಕಲೆ ಮತ್ತು ಅನ್ವಯಿಕ ಕಲೆಯ ಮೂರು ವರ್ಷದ ಪದವಿ ಮಟ್ಟದ ಪಠ್ಯಕ್ರಮ ರಚನಾ ಸಮಿತಿಯ ಸದಸ್ಯರು.
1982–1984	:	ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ಉನ್ನತ ಕಲಾಶಿಕ್ಷಣ ಪರೀಕ್ಷಾ ಮಂಡಳಿಯ ಸದಸ್ಯರಾಗಿ, ಅಧ್ಯಕ್ಷರಾಗಿ ಸೇವೆ.
1979–1982	:	ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಲಲಿತಕಲಾ ನಿಕಾಯದ ಸದಸ್ಯರು.
1983–2003	:	ಬೆಂಗಳೂರು ವಿಶ್ವವಿದ್ಯಾನಿಲಯದ ಬಿ.ಎಫ್.ಎ. ಪದವಿ ಹಾಗೂ ಎಂ.ಎಫ್.ಎ. (ಸ್ನಾತಕೋತ್ತರ ಪದವಿ) ಪರೀಕ್ಷಾ ಅಧ್ಯಯನ ಮಂಡಳಿಯ ಸದಸ್ಯರು ಹಾಗೂ ಪರೀಕ್ಷರು.

1987–1999	:	ವಿಶ್ವವಿದ್ಯಾನಿಲಯದ ಲಲಿತಕಲಾ ಅಧ್ಯಯನ ಮಂಡಳಿ ಹಾಗೂ ಪರೀಕ್ಷಾ ಮಂಡಳಿಯ ಸದಸ್ಯರು
1989–91	:	ಮೈಸೂರು ವಿಶ್ವವಿದ್ಯಾನಿಲಯ ದೃಶ್ಯಕಲಾ ಸಂಸ್ಥೆಗಳ ಅಫಿಲಿಯೇಷನ್ ಸಮಿತಿಯ ಸದಸ್ಯರು
1981–1990	:	ಚಿತ್ರದುರ್ಗ ಜಿಲ್ಲೆಯಿಂದ ವಿಶ್ವವಿಖ್ಯಾತ ಮೈಸೂರು ದಸರಾ ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಸ್ಥಬ್ಧಚಿತ್ರ ವಿನ್ಯಾಸ ನಿರ್ಮಾಣದ ಉಸ್ತುವಾರಿ, ಬಹುಮಾನ ಗಳಿಕೆ.
1975–1992	:	ಭಾರತೀಯ ತಾಂತ್ರಿಕ ಶಿಕ್ಷಣ ಪ್ರಾಧಿಕಾರ ನವದೆಹಲಿ, ಸಂಸ್ಥೆಯ ಸದಸ್ಯರು
1993–2003	:	ಕುವೆಂಪು ವಿಶ್ವವಿದ್ಯಾನಿಲಯದ ದೃಶ್ಯಕಲಾ ಅಧ್ಯಯನ ಮಂಡಳಿಯ ಅಧ್ಯಕ್ಷರಾಗಿ ನೇಮಕ
1994–1997	:	ರಾಷ್ಟ್ರೀಯ ಲಲಿತಕಲಾ ಅಕಾಡೆಮಿ ನವದೆಹಲಿಯ ಕಲಾಶಿಕ್ಷಣ ಮಂಡಳಿಗೆ ಕರ್ನಾಟಕದಿಂದ ಸದಸ್ಯರಾಗಿ ನಾಮಕರಣ
1995–2000	:	ಕುವೆಂಪು ವಿಶ್ವವಿದ್ಯಾನಿಲಯದ ಶಿಕ್ಷಣ ಮಂಡಳಿ ಹಾಗೂ ಸೆನೇಟ್ ಸದಸ್ಯರಾಗಿ ನಾಮಕರಣ
2000–2003		ಮೂರು ವರ್ಷದ ಅವಧಿಗೆ ಹರಿಯಾಣ ರಾಜ್ಯದ ಕುರುಕ್ಷೇತ್ರ ವಿಶ್ವವಿದ್ಯಾನಿಲಯಕ್ಕೆ ದೃಶ್ಯಕಲಾ ವಿಷಯದ ತಜ್ಞರ ಸಮಿತಿಗೆ ಸದಸ್ಯರು
1995–2004 ಮತ್ತು 2008	:	ಹಂಪಿ ಕನ್ನಡ ವಿಶ್ವವಿದ್ಯಾನಿಲಯ ದೃಶ್ಯಕಲಾ ವಿಭಾಗದ ಅಧ್ಯಯನ ಮಂಡಳಿ ಹಾಗೂ ಪರೀಕ್ಷಾ ಮಂಡಳಿಯ ಸದಸ್ಯರು
2000–2003	:	ದಾವಣಗೆರೆ ದೃಶ್ಯಕಲಾ ಪರಿಷತ್– ಅಧ್ಯಕ್ಷರು
2003–2004	:	ಕನ್ನಡ ವಿಶ್ವವಿದ್ಯಾನಿಲಯ ಹಂಪಿ ಇವರ ಆಹ್ವಾನದ ಮೇರೆಗೆ ದೃಶ್ಯಕಲಾ ವಿಭಾಗದ ಮುಖ್ಯಸ್ಥರು

2004	:	ಹಂಪಿ ಕನ್ನಡ ವಿಶ್ವವಿದ್ಯಾನಿಲಯದಲ್ಲಿ ದೃಶ್ಯಕಲಾ ವಿಭಾಗದ ಪಿಎಚ್.ಡಿ. ವಿದ್ಯಾರ್ಥಿಗಳಿಗೆ ಬಾಹ್ಯ ಮಾರ್ಗದರ್ಶಕರಾಗಿ ನೇಮಕ.
2005	:	ಮೈಸೂರಿನ ಡಿ.ಎಂ.ಎಸ್. ಲಲಿತಾಕಲಾ ಮಹಾ ಸಂಸ್ಥಾನಕ್ಕೆ ಗೌರವ ಡೀನ್‌ರಾಗಿ ನೇಮಕ.
2009 ಡಿಸೆಂಬರ್	:	ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಲಲಿತಕಲೆಗಳ ನಿಕಾಯದ ಸಮಿತಿಯ ಸದಸ್ಯರಾಗಿ ನಾಮಕರಣ.

ಏಕ ವ್ಯಕ್ತಿ ಪ್ರದರ್ಶನಗಳು

1974, 1976, 1979	–	ದಾವಣಗೆರೆ
1973, 1974, 1977, 1985	–	ಬೆಂಗಳೂರು
1974, 1981	–	ಚಿತ್ರದುರ್ಗ
1972, 1976, 1981	–	ಗುಡಿಗೇರಿ
1977	–	ಕೆ.ಜಿ.ಎಫ್, ಬಂಗಾರಪೇಟೆ, ದೊಡ್ಡಬಳ್ಳಾಪುರ
1977	–	ಮಾನ್ವಿ ಮತ್ತು ರಾಯಚೂರು
1979	–	ಶಿವಮೊಗ್ಗ
1980	–	ಕಾರವಾರ ಮತ್ತು ವಿಜಾಪುರ
1982	–	ಹಾಲಭಾವಿ ಆರ್ಟ್ ಗ್ಯಾಲರಿ ಧಾರವಾಡ
1986	–	ಇಳಕಲ್
1990	–	ಜಿಲ್ಲಾ ಸಾಹಿತ್ಯ ಸಮ್ಮೇಳನ, ಸಿರಿಗೆರೆ
1993	–	ಕಲಾಗುರು ಆರ್ಟ್ ಗ್ಯಾಲರಿ, ದಾವಣಗೆರೆ
1995	–	ಹಾಲಭಾವಿ ಸ್ಕೂಲ್ ಆಫ್ ಆರ್ಟ್, ಧಾರವಾಡ
1999	–	ಸರಕಾರಿ ಕಲಾ ಗ್ಯಾಲರಿ, ಧಾರವಾಡ
2002	–	ಹಿರೇಗೌಡರ ಜೀವನ ಸಾಧನೆಯ ಕಲಾ ಕೃತಿಗಳ ಪ್ರದರ್ಶನ, ಕರ್ನಾಟಕ ಚಿತ್ರಕಲಾ ಪರಿಷತ್, ಬೆಂಗಳೂರು.

ಭಾಗವಹಿಸಿದ ಕಲಾಶಿಬಿರಗಳು

